

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 06 | Issue : 264 | Friday 28-06-2024 | E-mail : maruti.b.hosamani76@gmail.com | Page: 4 | Price : Rs. 1/-


## ಹುನಗುಂದ ತಾಲೂಕ ಮಟ್ಟದ ಜನ ಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲುಗಳ ಮಹಾಪುರ





**ಹುನಗುಂದ :** ಪಟ್ಟಣದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪೋಲೀಸ್ ಇಲಾಖೆಯ ಸಹಯೋಗದಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರ ಅಧ್ಯಕ್ಷತೆಯಲ್ಲಿ ಮತ್ತು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ತಾಲೂಕ ಮಟ್ಟದ ಜನ ಸ್ಪಂದನಾ ಕಾರ್ಯಕ್ರಮದಲ್ಲಿ ತಾಲೂಕಿನ ಸಾರ್ವಜನಿಕರಿಂದ ಅಹವಾಲುಗಳ ಮಹಾಪುರ ಹರಿದು ಬಂದವು.

ಗುರುವಾರ ತಾಲೂಕ ಮಟ್ಟದ ಜನ ಸ್ಪಂದನಾ ಕಾರ್ಯಕ್ರಮದಲ್ಲಿ ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ರಸ್ತೆ, ಚರಂಡಿ,ಕುಡಿಯುವ ನೀರು,ಮುಳಗಡೆ ಗ್ರಾಮಗಳಲ್ಲಿರುವ ಮೂಲಭೂತ ಸೌಕರ್ಯಗಳ ಒದಗಿಸುವುದು, ರೈತರ ಸಮಸ್ಯೆಗಳು ಸೇರಿದಂತೆ ವಿವಿಧ ಇಲಾಖೆಗಳಲ್ಲಿರುವ 100 ಕ್ಕೂ ಹೆಚ್ಚು ಸಮಸ್ಯೆಗಳ ಅಹವಾಲುಗಳನ್ನು ಜನರಿಂದ ಸ್ವೀಕರಿಸಿ ಒಂದು ವಾರದಲ್ಲಿಯೇ ಇತ್ಯರ್ಥ ಪಡಿಸಿ ಅರ್ಹ ಫಲಾನುಭವಿಗಳಿಗೆ ಉತ್ತರ ನೀಡುವ ತಿರ್ಮಾನವನ್ನು ತಗೆದು ಕೊಳ್ಳಲಾಯಿತು.

ಕರ್ನಾಟಕ ವೀರಶೈವ ಮತ್ತು ಲಿಂಗಾಯತ ಅಭಿವೃದ್ದಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಜನ ಸ್ಪಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಜನರಿಂದ ಆಯ್ಕೆಗೊಂಡ ನಮ್ಮ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯವನ್ನು ಈ ಜನ ಸ್ಪಂದನಾ ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ರೈತರು, ಬಡಬಗ್ಗರು, ಮಹಿಳೆಯರು ನೀಡಿರುವ ಅಹವಾಲುಗಳಿಗೆ ಸಂಬಂಧಿಸಿದ ನಮ್ಮ ಇಲಾಖೆಗಳ ಅಧಿಕಾರಿಗಳು ಅವುಗಳನ್ನು ಜವಾಬ್ದಾರಿತವಾಗಿ ಪರಿಶೀಲಿಸಿ ತಮ್ಮ ಸಮಸ್ಯಗಳಿಗೆ ಒಂದು ವಾರದಲ್ಲಿಯೇ ನ್ಯಾಯವನ್ನು ಒದಗಿಸುವ ಕಾರ್ಯವನ್ನು ಮಾಡುತ್ತಾರೆ.

ಇನ್ನು ರಾಜ್ಯದಲ್ಲಿ ನಮ್ಮ ಮುಖ್ಯಮಂತ್ರಿಗಳು ಸಹ ಪ್ರತಿ ಮೂರು ತಿಂಗಳಿಗೊಮ್ಮೆ ನೇರವಾಗಿ ಜನರ ಸಮಸ್ಯೆಗಳನ್ನು ಕೇಳುವ ಕಾರ್ಯವನ್ನು ಮಾಡುತ್ತಿದ್ದಾರೆ.

ಅವರ ಆದೇಶದ ಮೇಲೆ ಜಿಲ್ಲೆ ಹಾಗೂ ತಾಲೂಕ ಮಟ್ಟದಲ್ಲಿ ಕಡ್ಡಾಯವಾಗಿ ಜನ ಸ್ಪಂದನಾ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಇನ್ನು ಮುಂದೆ ತಾಲೂಕ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಪ್ರತಿ ಗ್ರಾ.ಪಂ ಮಟ್ಟದಲ್ಲಿ ಜನ ಸ್ಪಂದನಾ ಕಾರ್ಯಕ್ರಮ ನಡೆಸಿ ಗ್ರಾಮೀಣ ಪ್ರದೇಶದ ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳದಲ್ಲಿ ಇತ್ಯರ್ಥ ಪಡಿಸುವ ಕಾರ್ಯವನ್ನು ಮಾಡಲಾಗುವುದು ಎಂದರು.

**ಜನ ಸ್ಪಂದನಾ ಕಾರ್ಯಕ್ರಮದಲ್ಲಿ ಬಂದ ಅರ್ಜಿಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆಯನ್ನು ತಾಳಲಾರದೇ ಜವಾಬ್ದಾರಿಯುತವಾಗಿ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆಯನ್ನು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ನೀಡಿದರು.**

ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಮಾತನಾಡಿ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸಬೇಕು ಎನ್ನುವುದು ಮುಖ್ಯಮಂತ್ರಿಗಳ ಆಶಯವಾಗಿದ್ದು. ಈ ಕಾರ್ಯಕ್ರಮವನ್ನು ಗ್ರಾಮೀಣ ಮಟ್ಟಕ್ಕೆ ಕೊಂಡ್ಯೊಯಬೇಕು ಎನ್ನುವ ಆಶಯವನ್ನು ಶಾಸಕ ವಿಜಯಾನಂದ ಕಾಶಪ್ಪನವರ ಇಂಗಿತವನ್ನು ವ್ಯಕ್ತಪಡಿಸಿದ್ದು. ಅಧಿಕಾರಿ ವರ್ಗ ಜನರ ಸೇವಕರು ಜನ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಲಾಗುವುದು.

ಇವತ್ತು ಬಹುಪಾಲು ಸಮಸ್ಯೆಗಳು ರಸ್ತೆ, ಯುಕೆಪಿ ಇಲಾಖೆಗಳಿಗೆ ಸಂಬಂಧ ಪಟ್ಟಿದ್ದು, ಕಂದಾಯ ಇಲಾಖೆಗಳ ದಾಖಲೆಗಳ ತಿದ್ದುಪಡೆಗೆ ಸಂಬಂಧಿಪಟ್ಟದ್ದು ಹಾಗೂ ಮೂಲಭೂತ ಸೌಲಭ್ಯಗಳ ಸಂಬಂಧಿಸಿದ 100 ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ನಿಗಧಿತ ಅವಧಿಯಲ್ಲಿ ಸಮಸ್ಯೆಗಳಿಗೆ ಉತ್ತರ ನೀಡುವ ಕಾರ್ಯವನ್ನು ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿ.ಪಂ ಸಿಇಓ ಶಶಿಧರ ಕುರೇರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸಾರ, ತಹಶೀಲ್ದಾರ ನಿಂಗಪ್ಪ ಬಿರಾದಾರ, ತಾ.ಪಂ ಇಓ ಮುರಳೀಧರ ದೇಶಪಾಂಡೆ, ಬಿಇಓ ಜಸ್ಮೀನ ಕಿಲ್ಲೇದಾರ, ಸಿಪಿಐ ಸುನೀಲ ಸವದಿ, ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ಗುಡದಾರಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಾರ್ವಜನಿಕರು ಭಾಗಿಯಾಗಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಎಂ. ಬಂಡರಗಲ್ಲ ಹುನಗುಂದ**

## ಸಿಪಿಐ (ಎಂಎಲ್) ಲಿಬ್ರೇಶನ್ ಪಕ್ಷ ವತಿಯಿಂದ ಪ್ರತಿಭಟನೆ ಹಾಗೂ ಅನಿರ್ಧಿಷ್ಟ ಅವಧಿ ಧರಣಿ ಸತ್ಯಾಗ್ರಹ



**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ ದಿನಾಂಕ 26 ಜೂನ್ 2024 ರ ಬುಧವಾರ ದಂದು ಸಿ ಪಿ ಐ (ಎಂಎಲ್ ) ಲಿಬರೇಷನ್ ಪಕ್ಷ ಮತ್ತು ಅಖಿಲ ಭಾರತ ಮಹಾಸಭಾ,ಅಖಿಲ ಭಾರತ ಕೃಷಿ ಕಾರ್ಮಿಕ ಸಂಘಟನೆ ಮತ್ತು ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯಿಂದ ನೂತನ ಕೊಟ್ಟೂರು ತಾಲೂಕಿನ ವಿವಿಧ ಕಚೇರಿ ಪ್ರಾರಂಭಕ್ಕಾಗಿ ಮತ್ತು ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ವಿವಿಧ ಗ್ರಾಮ ಪಂಚಾಯಿತಿಗಳ ಮೂಲಭೂತ ಸೌಕರ್ಯಕ್ಕಾಗಿ ಸರ್ಕಾರಕ್ಕೆ ಒತ್ತಾಯಿಸಿ ತಹಸೀಲ್ದಾರ್ ಅವರ ಮೂಲಕ ಪ್ರತಿಭಟನಾ ಮತ್ತು ಅನಿರ್ದಿಷ್ಟ ಅವಧಿ ಧರಣಿ ಸತ್ಯಾಗ್ರಹ ನಡಸಿ ಮನವಿ ಸಲ್ಲಿಸಲಾಯಿತು. ಪ್ರಮುಖವಾದ ಬೇಡಿಕೆಗಳೆಂದರೆ ನೂತನ ಕೊಟ್ಟೂರು ತಾಲೂಕಿನಲ್ಲಿ ಸರ್ಕಾರಿ ಪದವಿ ಕಾಲೇಜ್, ನೂತನ ಕಚೇರಿಗಳು ಕೆಲ ಅಧಿಕಾರಿಗಳು ಹಾಗೂ ಪಿಡಿಓಗಳ ಭ್ರಷ್ಟಾಚಾರ, ಡೋರ್ ನಂಬರ್ ಮತ್ತು ಫಾರಂ ನಂಬರ್ 3,ತಾಲೂಕಿನ ಎಲ್ಲಾ ಕೆರೆಗಳ ಒತ್ತುವರಿ ತೆರವು ಗೊಳಿಸಲು, ಕೆ ಅಯ್ಯನಹಳ್ಳಿ ಗ್ರಾಮಕ್ಕೆ ಮುರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ವಿವಿಧ ಬೇಡಿಕೆಗಳನ್ನು ಕುರಿತು ಗುಡಿಯರ್ ಮಲ್ಲಿಕಾರ್ಜುನ್ ಸಿಪಿಐ (ಎಂಎಲ್) ಲಿಬರೇಶನ್ ತಾಲೂಕು ಕಾರ್ಯದರ್ಶಿ ಗುಡದಯ್ಯ ಟೀ ಅಜ್ಜಪ್ಪ ರಾಮನಗೌಡ ಮತ್ತಿತರರು ವಿದ್ಯಾರ್ಥಿಗಳು ಸಮೂಹವೇ ಉಪಸ್ಥಿತರಿದ್ದು ಮತ್ತು ಪೊಲೀಸ್ ಸಿಬ್ಬಂದಿಯವರು ಸುರಕ್ಷತೆ ಕಾಪಾಡುವಲ್ಲಿ ಪಾತ್ರರಾಗಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು.**

## ವೃತ್ತಿತರಬೇತಿಗಾಗಿ ಕಾನೂನು ಪದವಿಧರರಿಂದ ಅರ್ಜಿ ಆಹ್ವಾನ

**ಜಮಖಂಡಿ :** ಸನ್ 2024–25ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾನೂನು ಪಧವಿಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ಎರಡು ವರ್ಷಗಳ ವೃತ್ತಿ ತರಬೇತಿ ನೀಡುವ ಸಲುವಾಗಿ ಕಾನೂನು ಪದವಿ ತೇರ್ಗಡೆಯಾದ ಅರ್ಹ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಇಲಾಖೆ ವೆಬ್‌ಸೈಟ್ (www.sw.kar.nic.in) ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಇಲಾಖೆ ವೆಬ್‌ಸೈಟ್ (www.twd.karnataka.gov.in) ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದ್ದು, ಕಾನೂನು ಪದವಿ ತೇರ್ಗಡೆಯಾದ ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಈ ಕಾರ್ಯಾಲಯಕ್ಕೆ ಒಂದು ಪ್ರತಿ ಸಲ್ಲಿಸುವಂತೆ ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾರೀರಿಕ ಮಾನಸಿಕ ಸ್ವಾಸ್ಥ್ಯ ಯೋಗದಿಂದ ಸಿದ್ದಿ: ಉಮರಾಣಿ



**ರಬಕವಿ–ಬನಹಟ್ಟಿ :** ಜೀವಾತ್ಮ ಪರಮಾತ್ಮನಲ್ಲಿ ಕೂಡುವಂತೆ ಮಾಡುವುದೇ ಯೋಗ. ಭಾರತೀಯ ಋಷಿಮುನಿಗಳು, ಯೋಗಿಗಳು ಯೋಗದ ಮಹತ್ವವನ್ನು ಅರಿತು ಮುಂದಿನ ಪೀಳಿಗೆಗೂ ಕೊಟ್ಟಿರುವ ಮಹತ್ವದ ಕೊಡುಗೆಯಾಗಿದೆ. ಇಂದು ಭಾರತ ಅಷ್ಟೇ ಅಲ್ಲ ಇಡೀ ಜಗತ್ತು ಯೋಗದ ಲಾಭ ಪಡೆಯುತ್ತಿದೆ. ಯೋಗದಿಂದ ಶಾರೀರಿಕ, ಮಾನಸಿಕ ಸ್ವಾಸ್ಥ ಸಿದ್ಧಿಸುತ್ತದೆ ಎಂದು ಪಿರಾಮಿಡ್ ಮಾಸ್ಟರ್, ಬೆಳಗಾವಿ ಜಿಲ್ಲಾ ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಯೋಗಗುರು ಎಸ್. ಎ. ಉಮರಾಣಿ ಹೇಳಿದರು.

ರಬಕವಿಯ ಶ್ರೀಮದ್ ವೀರಶೈವ ಕುರುಹಿನಶೆಟ್ಟಿ ಸಮಾಜ, ಶ್ರೀ ನೀಲಕಂಠೇಶ್ವರ ದೇವಸ್ಥಾನ ಸಮುದಾಯ ಭವನದಲ್ಲಿ ಹತ್ತನೇ ವಿಶ್ವ ಯೋಗ ದಿನವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಅವರು ಯೋಗದ ಮಹತ್ವ ತಿಳಿಸಿದರು.

ನಂತರ ವಿವಿಧ ಆಸನಗಳನ್ನು ಯೋಗಗುರು ಉಮರಾಣಿ ಅವರು ಹೇಳಿಕೊಟ್ಟರು. ಸ್ಕಂದ ಚಕ್ರಾಸನ, ಕಟಿ ಚಾಲನಾ ಕ್ರಿಯೆ, ತಾಡಾಸನ, ಪಾದ ಹಸ್ತಾಸನ, ಅರ್ಧಚಕ್ರಾಸನ, ದಂಡಾಸನ, ಭದ್ರಾಸನ, ವಜ್ರಾಸನ, ಉಸ್ಟ್ರಾಸನ, ಅರ್ಧ ಮತ್ಸೆಂದ್ರಾಸನ, ಮಕರಾಸನ, ಭುಜಂಗಾಸನ, ಪ್ರಾಣಾಯಾಮ, ಕಪಾಲಭಾತಿ, ಅನುಲೋಮ ವಿಲೋಮ, ಧ್ಯಾನ ಹೇಳಿಕೊಟ್ಟರು. ಮನೆಗೆಲಸದ ಒತ್ತಡದ ಮಧ್ಯೆಯೂ ಮಹಿಳೆಯರು ನಿತ್ಯ ಯೋಗಾಭ್ಯಾಸ ರೂಢಿಸಿಕೊಳ್ಳುವುದು ಉತ್ತಮ ಎಂದರು.

ಕುರುಹಿನಶೆಟ್ಟಿ ಸಮಾಜದ ಹಿರಿಯರಾದ ಮಲ್ಲೇಶಪ್ಪ ಕುಚನೂರ ಅಧ್ಯಕ್ಷತೆ ವಹಿಸಿದ್ದರು. ಮನುಷ್ಯನ ನೆಮ್ಮದಿ, ಆರೋಗ್ಯಪೂರ್ಣ ಜೀವನಕ್ಕೆ ಯೋಗ ಅವಶ್ಯ ಎಂದು ಅವರು ಹೇಳಿದರು.

ರಬಕವಿ–ಬನಹಟ್ಟಿ ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಎಲ್ಲಾ ಸಂಪತ್ತುಗಳಲ್ಲಿ ಆರೋಗ್ಯ ಸಂಪತ್ತು ಶ್ರೇಷ್ಠ. ಯೋಗದಿಂದ ರೋಗದೂರ. ದೈಹಿಕ, ಮಾನಸಿಕ, ಬೌದ್ಧಿಕ ಉತ್ತಮ ಆರೋಗ್ಯಕ್ಕೆ ಯೋಗ ಮಾಡಬೇಕೆಂದರು.

ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷರಾದ ಅಶೋಕ ಕುಚನೂರ ಸ್ವಾಗತಿಸಿದರು. ಇಂದುಧರ ಬೆಳಗಲಿ ನಿರೂಪಿಸಿದರು. ಬಿ. ಪಿ. ತೇರಣಿ ವಂದಿಸಿದರು.

ಡಾ. ಎಸ್. ಎಸ್. ಕುಚನೂರ, ಈರಣ್ಣ ಗಣಮುಖಿ, ವಿಜಯಲಕ್ಷ್ಮಿ ಬೆಳಗಲಿ, ವಿಜಯಾ ಕುಚನೂರ, ಶ್ರೀದೇವಿ ಪರಮಶೆಟ್ಟಿ, ರೂಪಾ ಬೆಳಗಲಿ, ಮಂಜುಳಾ ಬೆಳಗಲಿ, ಗಿರಿಜಾ ಕುಚನೂರ ಇನ್ನಿತರರು ಪಾಲ್ಗೊಂಡಿದ್ದರು.

## ಯುವಕಲಾವಿದರತ್ತಲೂ ಸರ್ಕಾರ ಗಮನ ಹರಿಸಲಿ



**ಬೆಳಗಾವಿ :** ನಾನೊಬ್ಬ ಕಲಾವಿದನನಾಗಿದ್ದು ನಮ್ಮದು ಸಂಕಷ್ಟದ ಬದುಕಾಗಿದೆ. ಹಣಕಾಸಿನ ತೊಂದರೆಯೊಂದಿಗೆಯೇ ನಾವು ಜೀವನ ಸಾಗಿಸಬೇಕಾಗಿದೆ. ಸರ್ಕಾರದಿಂದ ಯಾವುದೇ ಸಹಾಯಧನ ದೊರೆಯುತ್ತಿಲ್ಲ. ಇದ್ದರೂ ಅದು ಕೇವಲ ಹಿರಿಯ ನಾಗರಿಕರಿಗೆ ಮಾತ್ರವಿದೆ. ಬೆಳೆಯುತ್ತಿರುವ ಏನನ್ನಾದರೂ ಸಾಧಿಸಬೇಕೆನ್ನುವ ಯವಕಲಾವಿದರತ್ತ ಸರ್ಕಾರ ಗಮನ ಹರಿಸಲಿ ಎಂದು ಖ್ಯಾತ ಹಾಸ್ಯ ಕಲಾವಿದ ಆನಂದ ಪತ್ತಾರ ಇಂದಿಲ್ಲಿ ಹೇಳಿದರು.

ಕಲಾವಿದರ ಸಹಾಯಾರ್ಥವಾಗಿ ಒಂದೇ ದಿನ ಮದ್ಯಾಹ್ನ 3 ಹಾಗೂ ಸಾಯಂಕಾಲ 6 ಗಂಟೆ–ಗೆ ಎರಡು ಪ್ರದರ್ಶನಗಳನ್ನು ನಗರದ ಕನ್ನಡ ಭವನ ಸಂಯೋಜನೆಯಲ್ಲಿ 'ಮುದುಕನ ಮದುವೆ' ಹಾಸ್ಯ ನಾಟಕವನ್ನು ನೆಹರೂನಗರ ರಾಮದೇವ ಹೊಟೇಲ ಹತ್ತಿರವಿರುವ ಕನ್ನಡ ಭವನದಲ್ಲಿ ಪ್ರದರ್ಶನಗೊಳ್ಳಲಿದೆ. ನಾಟಕ ಹಾಗೂ ಕಲಾವಿದರು ಪಡುತ್ತಿರುವ ಸಂಕಷ್ಟಗಳ ಕುರಿತು ಹಂಚಿಕೊಳ್ಳಲು ಮಾಧ್ಯಮಗೋಷ್ಠಿಯನ್ನು ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದರು ಈ ಸಂದರ್ಭದಲ್ಲಿ ಆನಂದ ಪತ್ತಾರ ಮೇಲಿನಂತೆ ಹೇಳಿದರು.

ನಾವು ಆಗಾಗ ಕಲಾವಿದರ ಸಹಾಯಾರ್ಥವಾಗಿ ನಾಟಕಗಳ ಪ್ರದರ್ಶನವನ್ನು ಮಾಡಿ ಅದರಿಂದ ಬಂದಂತಹ ಹಣವನ್ನು ಕಲಾವಿದರ ಮಕ್ಕಳ ಶಿಕ್ಷಣಕ್ಕಾಗಿ, ತಂದೆ ತಾಯಿ ಹಿರಿಯರ ವೈದ್ಯಕೀಯ ಖರ್ಚಿಗಾಗಿ ಬಳಿಸುತ್ತೇವೆ. ಇದೇ ರೀತಿ ಈಗ ಪ್ರದರ್ಶನಗೊಳ್ಳುತ್ತಿರುವ 'ಮುದುಕನ ಮದುವೆ' ಸಹ ಕಲಾವಿದರ ಸಹಾಯಾರ್ಥ ನಾಟಕವಾಗಿದೆ. ರಂಗಭೂಮಿಯನ್ನೆ ನಂಬಿಕೊಂಡು ನಾವು ಬದುಕುತ್ತಿದ್ದೇವೆ. ಸಹಾಯಧನ ಎರಡು ನೂರು ರೂಪಾಯಿ ಇದ್ದು ಟಿಕೆಟ್ ಕೊಂಡು ನಾಟಕವನ್ನು ನೋಡಿ ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡರು.

ಕನ್ನಡ ಭವನದ ಯ. ರು. ಪಾಟೀಲ ಮಾತನಾಡಿ ಕನ್ನಡ ಭವನ ಸಾಹಿತ್ಯಿಕ, ಸಾಂಸ್ಕೃತಿಕ ಅದರಲ್ಲೂ ವಿಶೇಷವಾಗಿ ರಂಗಭೂಮಿಗಾಗಿ ಆಸರೆಯಾಗಿ ನಿಂತಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಶೇಷ ರಿಯಾಯತಿ ಬಾಡಿಗೆಯೊಂದಿಗೆ ನೀಡುತ್ತಿದೆ. ಗಡಿಭಾಗವಾದ ಬೆಳಗಾವಿಯಲ್ಲಿ ರಂಗಭೂಮಿ ಚಟುವಟಿಕೆಗಳು ಬೆಳೆಯಬೇಕು ಅದಕ್ಕಾಗಿ ಎಲ್ಲ ರೀತಿಯ ಸಹಕಾರವಿದೆ ಎಂದು ಹೇಳಿದರು.

ಹನುಮಂತಪ್ಪ ಬಾಗಲಕೋಟ, ಬಿ. ಎ. ಪಾಟೀಲ, ಯ.ರು. ಪಾಟೀಲ, ಆನಂದ ಪತ್ತಾರ ಮತ್ತು ಶ್ರೀಮತಿ ಹೇಮಾ ಪಾಟೀಲ ಉಪಸ್ಥಿತರಿದ್ದರು.

## ಕಾರು ಹುಣ್ಣಿಮೆ: ರಬಕವಿ–ಬನಹಟ್ಟಿಯಲ್ಲಿ ಮಣ್ಣಿನ ಎತ್ತುಗಳ ಪೂಜೆಯ ಸಂಭ್ರಮ

● ಕಿರಣ ಶ್ರೀಶೈಲ ಆಳಗಿ

**ರಬಕವಿ–ಬನಹಟ್ಟಿ :** ಮುಂಗಾರು ಆರಂಭದ ಮೊದಲ ಹಬ್ಬವಾಗಿರುವ ಕಾರು ಹುಣ್ಣಿಮೆಯು ಮುಂದೆ ಸಾಲುಸಾಲಾಗಿ ಹಬ್ಬಗಳನ್ನು ಕರೆದುಕೊಂಡು ಬರುವ ಹಬ್ಬವಾಗಿದೆ ಎಂದು ಗ್ರಾಮೀಣ ಪ್ರದೇಶದ ಜನರ ಮಾತು. ಇಲ್ಲಿಂದಲೇ ನಮ್ಮ ಹಬ್ಬಗಳು ಆರಂಭವಾಗುತ್ತವೆ. ಇಂದು ಶುಕ್ರವಾರ ರಬಕವಿ–ಬನಹಟ್ಟಿಯಲ್ಲಿ ಕಾರು ಹುಣ್ಣಿಮೆ ನಿಮಿತ್ಯ ಮಣ್ಣಿನ ಎತ್ತುಗಳ ಪೂಜೆಯ ಸಂಭ್ರಮ ನಡೆಯಿತು.

ಬನಹಟ್ಟಿಯಲ್ಲಿ ಕಾರು ಹುಣ್ಣಿಮೆಯ ಅಂಗವಾಗಿ ಸ್ಥಳೀಯ ಮಂಗಳವಾರ ಪೇಟೆಯಲ್ಲಿ ಮಣ್ಣಿನ ಎತ್ತುಗಳ ಮಾರಾಟ ಜೋರಾಗಿತ್ತು. ಸಮೀಪದ ಹೊಸೂರಿನ ಇಪ್ಪತ್ತಕ್ಕೂ ಹೆಚ್ಚು ಕುಟುಂಬಗಳು ಬೆಳಿಗ್ಗೆ ಆರು ಗಂಟೆಗೆ ಮಣ್ಣಿನ ಎತ್ತುಗಳನ್ನು ಮಾಡಲು ಆರಂಭಿಸಿ ಸಂಜೆ ಏಳು ಗಂಟೆಯವರೆಗೆ ಮಾರಾಟ ಮಾಡುತ್ತಾರೆ. ರಬಕವಿ ಬನಹಟ್ಟಿಯಲ್ಲಿ ಅಂದಾಜು ಐದರಿಂದ ಆರು ಸಾವಿರಕ್ಕೂ ಹೆಚ್ಚು ಜೋಡಿ



ಎತ್ತುಗಳನ್ನು ಮಾರಾಟ ಮಾಡುತ್ತಾರೆ. ಇನ್ನು ಕೆಲವರು ಎತ್ತುಗಳನ್ನು ತಲೆಯ ಮೇಲೆ ಇಟ್ಟುಕೊಂಡು ಮನೆ ಮನೆಗೆ ತೆರಳಿ ಮಾರಾಟ ಮಾಡಿ ಬರುತ್ತಾರೆ. ರೂ. 30 ರಿಂದ ರೂ. 250 ರವರೆಗೆ ಮಣ್ಣಿನ ಎತ್ತುಗಳು ಮಾರಾಟಗೊಂಡವು.

ಹೊಸೂರ ಗ್ರಾಮದ 91 ವರ್ಷದ ಚಂದ್ರವ್ವ ಕುಂಬಾರ ಏಳು ದಶಕಗಳಿಂದ ಎತ್ತುಗಳ ನಿರ್ಮಾಣ ಮಾಡುತ್ತ ಬಂದಿದ್ದಾರೆ. " ತಮ್ಮಾ ಒಂದ್ ಅಣೆಕ್ಕ ಎತ್ತುಗಳನ್ನು ಮಾರಿದಾಕಿ ನಾನು" ಎಂದು ಸಂಭ್ರಮದಿಂದ ಹೇಳುತ್ತಾರೆ. ಅವರ ಮನೆಯ ಸದಸ್ಯರಾದ ಯಲ್ಲವ್ವ, ಸುಜಾತಾ, ರಾಜೇಶ್ವರಿ, ಶಾಂತವ್ವ ಹಾಗೂ ಹೊಸ ತಲೆಮಾರಿನ ಮೊಮ್ಮಕ್ಕಳಾದ ರೇಣುಕಾ ಕುಂಬಾರ ಕೂಡಾ ಎತ್ತುಗಳ ನಿರ್ಮಾಣದಲ್ಲಿ ತೊಡಗಿದ್ದಾರೆ. 65 ವರ್ಷದ ಈರಪ್ಪ ಕುಂಬಾರ ಐವತ್ತು, ಶಿವಪ್ಪ ಕುಂಬಾರ ಮೂವತ್ತೈದು ಮತ್ತು ಉಮೇಶ ಕುಂಬಾರ ಇಪ್ಪತ್ತೈದು ವರ್ಷಗಳಿಂದ ಈ ವೃತ್ತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಕಾರು ಹುಣ್ಣುಮೆಯ ದಿನದಂದು ಸಂಜೆ ಎತ್ತುಗಳ ಓಟದ ಸ್ಪರ್ಧೆಯೊಂದಿಗೆ ಕಾರು ಹುಣ್ಣಿಮೆ ಮುಕ್ತಾಯಗೊಂಡರೆ ಇದು ಮುಂದೆ ಯಾವ ಬೆಳೆಗಳನ್ನು ಬೆಳೆಯಬಹುದು ಎಂಬುದಕ್ಕೆ ಮುನ್ನುಡಿಯಾಗುತ್ತದೆ.

ಜಗತ್ತು ಆಧುನಿಕತೆಯತ್ತ ಸಾಗಿದ್ದರೂ ನಮ್ಮ ಗ್ರಾಮೀಣ ಭಾಗದ ಜನರು ಇನ್ನೂ ನಮ್ಮ ದೇಸಿ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೊರಟಿರುವುದಕ್ಕೆ ಕಾರು ಹುಣ್ಣಿಮೆ ಸಾಕ್ಷಿಯಾಗಿದೆ.

## ಅಮೃತ ಸರೋವರ ದಡದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ



**ಸೂಳೇಭಾವಿ :** ಹುನಗುಂದ ತಾಲೂಕಿನ ಸೂಳೇಭಾವಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಅಮೃತ ಸರೋವರ ದಡದಲ್ಲಿ 10 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಉಸಿರಾಟದ ವ್ಯಾಯಮಗಳು ಸೂರ್ಯ ನಮಸ್ಕಾರ, ಪ್ರಾಣಾಯಾಮ ಸೇರಿದಂತೆ ವಿವಿಧ ರೀತಿಯ ವಿವಿಧ ಆಸನಗಳನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಮಹಾಂತೇಶ್ ಕೋಟಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಂಗಣ್ಣ ಕಳ್ಳೋಳ್ಳಿ , ಐಇಸಿ ಸಂಯೋಜಕ ಬಸವರಾಜಕೊಪ್ಪದ,ತಾಂತ್ರಿಕಸಹಾಯಕಲಾಲಸಾಬ್ ಗುರಗುಣ್ಣಿ, ಎಸ್.ಡಿ.ಎಂ.ಸಿ ಅಧ್ಯಕ್ಷ ಹುಲಗಪ್ಪ ಕುರಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಶಂಕರಾನಂದ ಹುಣಶ್ಯಾಳ, ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಪಂ ಸಿಬ್ಬಂದಿ ವರ್ಗ, ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಪ್ರತಿಯೊಬ್ಬರು ದಿನನಿತ್ಯ ಯೋಗ ಮಾಡಿ




**ರಬಕವಿ-ಬನಹಟ್ಟಿ :** ಯೋಗಕ್ಕೆ ಯಾವುದೇ ಧರ್ಮ, ಜಾತಿ, ಮತ, ಪಂಥ, ಪುರುಷ, ಮಹಿಳೆ, ಹಿರಿಯರು, ಕಿರಿಯರು, ಬಡವ, ಶ್ರೀಮಂತ ಎಂಬ ಬೇಧ ಭಾವವಿಲ್ಲ. ಪ್ರತಿಯೊಬ್ಬರು ದಿನನಿತ್ಯ ಯೋಗ, ಪ್ರಾಣಾಯಾಮ ಮತ್ತು ಧ್ಯಾನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ನಿರ್ದೇಶಕಿ ದೀಪಾ ಜಹಾಗೀರದಾರ ತಿಳಿಸಿದರು.

ಶುಕ್ರವಾರ ರಬಕವಿ ಬನಹಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಾಚಾರ್ಯ ಚೇತನ ಡಾಗಾ ಮಾತನಾಡಿ, ಯೋಗದಿಂದ ವ್ಯಕ್ತಿ ದೈಹಿಕವಾಗಿ, ಮಾನಸಿಕವಾಗಿ ಸದೃಢನಾಗುತ್ತಾನೆ. ಯೋಗ ಯುಕ್ತ ರೋಗ ಮುಕ್ತ ಎಂಬುದು ಸತ್ಯವಾದ ಮಾತು ಎಂದು ತಿಳಿಸಿದರು.

ಮಹಾಂತೇಶ ರಡ್ಡೆರಟ್ಟಿ, ಮಹಾದೇವ ಪೋತರಾಜ, ಚೇತನ ಚೋಪಡೆ, ರಾಜಶೇಖರ ಬೀಳಗಿ, ರಮೇಶ ಮಾಗುರಿ, ವಿನೋದ ಘಟ್ಟೆ, ಸೋಮು ನಿಂಗನೂರ, ರಮೇಶ ಕುಂಬಾರ, ಬಿ. ಎ. ದೇಸಾಯಿ, ಪ್ರಕಾಶ ಅಂಬಲಿ, ಓಂಕಾರ ಯರಗಟ್ಟಿಕರ, ಪ್ರಮೋದ ಹಾಲಳ್ಳಿ, ವೈಷ್ಣವಿ ಸುಥಾಳ ಸೇರಿದಂತೆ ಅನೇಕರು ಹಾಜರಿದ್ದರು.

# ರಕ್ತದಾನ ಶ್ರೇಷ್ಠವಾದುದು: ತೇಲಿ




**ರಬಕವಿ-ಬನಹಟ್ಟಿ :** ರಕ್ತದಾನ ಮಹಾದಾನ, ರಕ್ತದಾನದಿಂದ ಹಲವಾರು ರೋಗಿಗಳ ಜೀವವನ್ನು ಉಳಿಸಬಹುದು. ರಕ್ತದಾನಿಗಳು ರಕ್ತ ಕೊಡುವುದರಿಂದ ಅವರ ದೇಹದಲ್ಲಿ ಮೂರು ತಿಂಗಳ ಒಳಗೆ ಮತ್ತೆ ಹೊಸ ರಕ್ತ ಕಣಗಳು ಉತ್ಪತ್ತಿಯಾಗುತ್ತವೆ. ಇದರಿಂದ ಯಾರೂ ಭಯಪಡದೆ ರಕ್ತದಾನ ಮಾಡಬೇಕೆಂದು ಮಹಾದೇವ ತೇಲಿ ಮಾರ್ಮಿಕವಾಗಿ ಹೇಳಿದರು.

ವಿಶ್ವ ಯೋಗ ದಿನದಂದು ಬನಹಟ್ಟಿಯಲ್ಲಿ ಗ್ಲೋಬಲ್ ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಜರುಗಿದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ನಂತರ ಬಸವರಾಜ ಕೊಕಟನೂರ ಮಾತನಾಡಿ, ರಕ್ತದಾನ ಮಾಡುವವರ ಸಂಖ್ಯೆ ಹೆಚ್ಚಳವಾಗಬೇಕು. ಇದರಿಂದ ಜೀವ ಕಳೆದುಕೊಳ್ಳುವ ಸ್ಥಿತಿಯಲ್ಲಿರುವ ರೋಗಿಗಳಿಗೆ ಜೀವ ಕೊಟ್ಟಂತಾಗುತ್ತದೆ ಎಂದರು.

ದಂಪತಿ ರಕ್ತದಾನ: ಮದುವೆ ವಾರ್ಷಿಕೋತ್ಸವದಂದು ಬನಹಟ್ಟಿಯ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಚೇರಮನ್ನರು ಹಾಗೂ ಅವರ ದಂಪತಿಗಳು ಸ್ವಯಂಪ್ರೇರಿತವಾಗಿ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಗಮನ ಸೆಳೆದರು. ಆಚರಣೆಗಳನ್ನು ಸಮಾಜದ ಪರೋಪಕಾರಕ್ಕಾಗಿ ಮೀಸಲಿಟ್ಟು ಆಚರಿಸಿದಲ್ಲಿ, ಅದರ ಮಹತ್ವ ದೊರಕುವಲ್ಲಿ ಕಾರಣವೆಂದು ಮಹಾಂತೇಶ ಯಾದವಾಡ ತಿಳಿಸಿದರು.

ನೂಲಿನ ಗಿರಣಿ ಅಧ್ಯಕ್ಷ ಶ್ರೀಶೈಲ ಬೀಳಗಿ, ವ್ಯವಸ್ಥಾಪಕ ನಿರ್ದೇಶಕ ಕೆ. ಪ್ರಭಾಕರ, ಸುರೇಶ ಹಜಾರೆ, ಸಿದ್ರಾಮ ಖಾನಾಪುರ, ಮಹೇಶ ಚಿನಗುಂಡಿ, ಭೀಮಶಿ ಪೂಜಾರಿ, ಮಹಾಂತೇಶ ಯಾದವಾಡ, ಗಜಾನನ ಸಿಂಗನ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಬದಲಾಗುತ್ತಿರುವ ವ್ಯವಸ್ಥೆಯಲ್ಲಿ ಆರೋಗ್ಯ ಅವಶ್ಯಕ: ಡಾ. ದಡ್ಡಿ



**ಜಮಖಂಡಿ :** ಯೋಗದಿಂದ ಬಹಳಷ್ಟು ಪ್ರಯೋಜನಗಳಿದ್ದು, ಬದಲಾಗುತ್ತಿರುವ ವ್ಯವಸ್ಥೆಯಲ್ಲಿ ಆರೋಗ್ಯದ ಅರಿವು ಅತ್ಯವಶ್ಯಕವಾಗಿದೆ. ಯಮ, ನಿಯಮ, ಆಸನ, ಪ್ರಾಣಾಯಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಅಂತಹ ಎಂಟು ಆಸನಗಳಿಂದ ಇಂದ್ರಿಯ ನಿಗ್ರಹ, ಸ್ವಾಸ್ಥ್ಯ ಏಕಾಗ್ರತೆ ಪಡೆದುಕೊಳ್ಳಬಹುದು ಎಂದು ನಾಡೋಜ ಡಾ.ಎಚ್.ಜಿ.ದಡ್ಡಿ ಹೇಳಿದರು.

ನಗರದ ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಸಭಾಭವನದಲ್ಲಿ ಶುಕ್ರವಾರ ಕ್ರೀಡಾ ವಿಭಾಗ, ರೆಡ್‌ಕ್ರಾಸ್, ಐ.ಕ್ಯೂ.ಎ.ಸಿ ಮತ್ತು ಎನ್.ಎಸ್.ಎಸ್. ಘಟಕ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 10 ದಿನಗಳ ಯೋಗ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಆರೋಗ್ಯವೆಂದರೆ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಉತ್ತಮ ಸಂಬಂಧವನ್ನು ಹೊಂದುವುದೇ ಆರೋಗ್ಯ. ಮನುಷ್ಯ ಜೀವನ ಶೈಲಿ ಬದಲಾದಂತೆ ಹೊಸ ಹೊಸ ರೋಗಗಳು ಹುಟ್ಟಿಕೊಳ್ಳುತ್ತಿವೆ. ಆರೋಗ್ಯದ ಬಗ್ಗೆ ಮೊದಲು ನಾವು ತಿಳಿದುಕೊಳ್ಳಬೇಕು ಎಂದರು.

ವೇದಿಕೆಯಲ್ಲಿ ಪ್ರೊ. ಉಮೇಶ ದೇಸಾಯಿ, ಡಾ.ಎಸ್.ಎಸ್.ಸಿದ್ದಾಪೂರ, ಡಾ.ಎಸ್.ಎನ್.ಭಜಂತ್ರಿ, ಪ್ರೊ..ಎಸ್.ಪಿ. ಆಲಗೂರ, ಪ್ರೊ..ಚನ್ನಬಸು ಗುಣದಾಳ, ಪ್ರೊ..ಧರೆಪ್ಪ ಚನ್ನಪ್ಪಗೋಳ, ಡಾ.ಮಲ್ಲಿಕಾರ್ಜುನ ಅಂಬಲಿ, ಪ್ರೊ.. ಪ್ರಶಾಂತ ಸಜ್ಜನ, ಪ್ರೊ.ಎಸ್.ಎಂ.ಕುಂಬಾರ, ಪ್ರಭುಗೌಡ ಚಾಂದಕವಠೆ, ಪ್ರೊ.ಅಬಿದ ಮಾಳವಂಕರ ಸಹಿತ ಹಲವರು ಇದ್ದರು.

ಯೋಗ ತರಬೇತಿದಾರ ಬಿ.ಎಸ್.ಮಾಳಶೆಟ್ಟಿ ಕಾಲೇಜಿನ ವಿದ್ಯಾರ್ಥಿನಿಯರಿಗೆ 10 ದಿನಗಳ ತರಬೇತಿ ನೀಡುವ ಮೂಲಕ ವಿಶ್ವ ಯೋಗ ದಿನಾಚರಣೆಯಲ್ಲಿ ಪ್ರಾತಿಕ್ಷಿಕೆ ಪ್ರದರ್ಶನ ನೀಡಿದರು. ಸೌಂದರ್ಯ ಜಕಾತಿ ಪ್ರಾರ್ಥಿಸಿದರು. ಗಣಕವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಎಂ.ಎಂ.ಮಂಟೂರ ಸ್ವಾಗತಿಸಿದರು. ರೆಡ್‌ಕ್ರಾಸ್ ವಿಭಾಗದ ಸಂಯೋಜಕ ಪ್ರೊ. ಎಸ್.ಆರ್.ಹಂದಿಗುಂದ ಅತಿಥಿಗಳನ್ನು ಪರಿಚಯಿಸಿದರು. ಪ್ರೊ..ಆರ್.ಎಸ್. ಜಾಧವ ನಿರೂಪಿಸಿದರು. ಡಾ. ಸುನೀಲ ಮಣಕವಾಡ ವಂದಿಸಿದರು.

# ದೇಹ-ಮನಸ್ಸಿಗೆ ಯೋಗ ಪ್ರಮುಖ ಆಯುಧ: ಉಟಗಿ



**ಜಮಖಂಡಿ :** ನಿತ್ಯ ಜೀವನದಲ್ಲಿ ಯೋಗವು ಒಂದು ಅವಿಭಾಜ್ಯ ಅಂಗವಾಗಿದ್ದು ದಿನನಿತ್ಯದ ಜೀವನದಲ್ಲಿ ಅಳವಡಿಕೊಳ್ಳುವ ಮೂಲಕ ನಾವೆಲ್ಲರೂ ರೋಗಮುಕ್ತ ಜೀವನ ನಡೆಸಬಹುದು ಎಂದು ಶಿಕ್ಷಕ ಸಂಗನಬಸವ ಉಟಗಿ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯ ಮತ್ತು ಸೃಷ್ಠಿ ನಡುವೆ ಸಮನ್ವಯ ಏರ್ಪಡಿಸಿ ದೇಹ-ಮನಸ್ಸಿಗೆ ಶಾಂತಿ ನೀಡುವ ಆಯುಧವೇ ಯೋಗವಾಗಿದೆ. ಭಾರತವು ಯೋಗದ ಜನ್ಮ ಭೂಮಿಯಾಗಿದ್ದು ಪತಂಜಲಿ ಮಹಾಮುನಿಗಳು ಅಷ್ಟಾಂಗ ಮಾರ್ಗದ ಮೂಲಕ ಅದನ್ನು ಮನುಕುಲಕ್ಕೆ ವರವಾಗಿ ದಯಪಾಲಿಸಿದ್ದಾರೆ. ನಾವೆಲ್ಲರೂ ಯೋಗವನ್ನು ರೂಢಿಸಿಕೊಂಡು ಮಾನವತೆಯ ಜ್ಯೋತಿ ಹಚ್ಚಬೇಕಾಗಿದೆ ಎಂದರು.

ದೈಹಿಕ ಶಿಕ್ಷಣ ಶಿಕ್ಷಕ ಬಾಹುಬಲಿ ಮುತ್ತೂರ ಪ್ರಾತ್ಯಕ್ಷಿಕೆಯ ಮೂಲಕ ಮಕ್ಕಳಿಗೆ ಒಂದುವರೆ ಗಂಟೆವರೆಗೆ ಯೋಗಾಭ್ಯಾಸದ ಜೊತೆಗೆ ಯೋಗದ ಮಹತ್ವ ಕುರಿತು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಶಿಕ್ಷಕರಾದ ಸಂಜೀವ ಝುಂಬುರೆ, ಶಾರದಾ ಮಠ, ಆಸಿಪಾಬಾನು ಮೋಮಿನ, ಸವಿತಾ ಬೆನಕಟ್ಟಿ ಶಕುಂತಲಾ ಬಿರಾದಾರ ಸಹಿತ ಹಲವರು ಇದ್ದರು.

# ವಿಶ್ವ ಯೋಗ ದಿನಾಚರಣೆ

## ಉತ್ತಮ ಆರೋಗ್ಯಕ್ಕೆ ಯೋಗವೇ ಪ್ರದಾಮ



**ತೇರದಾಳ :** ಸಾಕಷ್ಟು ಒತ್ತಡದ ಜೀವನ ನಡೆಸುತ್ತಿರುವ ಮನುಷ್ಯ ಆರೋಗ್ಯ ಕಾಪಾಡಿಕೊಳ್ಳಬೇಕಾಗಿರುವುದು ಅಷ್ಟೇ ಅವಶ್ಯಕವಾಗಿದೆ.

ಆದ್ದರಿಂದ ಉತ್ತಮ ಆರೋಗ್ಯಕ್ಕಾಗಿ ಪ್ರತಿದಿನ ಯೋಗ ಮಾಡುವುದನ್ನು ರೂಢಿಸಿಕೊಳ್ಳಬೇಕೆಂದು ಹಳೇ ಹುಬ್ಬಳ್ಳಿ ನೀಲಕಂಠಮಠದ ಜಗದ್ಗುರು ಶಿವಶಂಕರ ಶಿವಾಚಾರ್ಯ ಹೇಳಿದರು.

ವಿಶ್ವ ಯೋಗ ದಿನ ನಿಮಿತ್ತ ಇಲ್ಲಿನ ಕುರುಹಿನಶೆಟ್ಟಿ ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯಲ್ಲಿಹಮ್ಮಿಕೊಂಡಿದ್ದಕಾರ್ಯಕ್ರಮದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಬದುಕಿನಲ್ಲಿ ಸಾಧನೆ ಮಾಡಬೇಕಾದರೆ ಮೊದಲು ಆರೋಗ್ಯ ಚನ್ನಾಗಿರಬೇಕು. ಆ ದಿಸೆಯಲ್ಲಿ ಯೋಗ, ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಸದೃಢವಾದ ಶರೀರ ಹೊಂದಬೇಕೆಂದು ಸಲಹೆ ಮಾಡಿದರು.

ಏಕಪಾದ ಪಚ್ಚಿಮೋತಾಸನ, ದ್ವಿಪಾದ ಪಚ್ಚಮೋಸಾತನ, ಸರ್ವಾಂಗಾಸನ, ಚಕ್ರಾಸನ, ಧನುರಾಸನ, ಶಿರ್ಶಾಸನ, ಬಕಾಸನ, ಪಾರ್ಶ್ವಬಕಾಸನ, ಮಯೂರಾಸನ, ಗರುಡಾಸನ, ನಟರಾಜಾಸನ, ತಾಡಾಸನ, ವೃಕ್ಷಾಸನ, ಹನುಮಾನ್ ಬೈಠಕ್, ವೃಚ್ಚಿಕಾಸನ ಸೇರಿದಂತೆ ಹಲವು ಆಸನಗಳನ್ನು ಮಾಡುವ ಮೂಲಕ ವಿದ್ಯಾರ್ಥಿಗಳ ಗಮನ ಸೆಳೆದರು.

ಸಂಸ್ಥೆ ಕಾರ್ಯದರ್ಶಿ ಎಂ.ಎಂ. ಜಾಡರ, ಸದಸ್ಯರಾದ ಸಂಜು ಖವಾಸಿ, ಚನ್ನಪ್ಪ ಜೈನಾಪುರ, ಕುರುಹಿನಶೆಟ್ಟಿ ಸಮಾಜದ ಅಧ್ಯಕ್ಷ ಪರಪ್ಪ ಆಲಗುಂಡಿ ಇದ್ದರು.

# 4ನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

## ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಪೂರೈಸಿ: ಶಿವರಾಜ ತಂಗಡಗಿ



**ಕೊಪ್ಪಳ :** ಪ್ರಸ್ತುತ ಜಿಲ್ಲೆಯಲ್ಲಿ ಉತ್ತಮ ರೀತಿಯ ಮಳೆಯಾಗಿದ್ದು, ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಚುರುಕುಗೊಂಡಿದೆ. ರೈತರಿಗೆ ಉತ್ತಮ ಗುಣಮಟ್ಟದ ರಸಗೊಬ್ಬರ ಪೂರೈಸಲು ಕ್ರಮಕೈಗೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್‌ನ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜೂನ್ 19ರಂದು ಹಮ್ಮಿಕೊಂಡಿದ್ದ 2023-24ನೇ ಸಾಲಿನ ಕೊಪ್ಪಳ ಜಿಲ್ಲಾ ಮಟ್ಟದ 4ನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಅವಶ್ಯವಿರುವ ಬಿತ್ತನೆ ಬೀಜ, ರಸಗೊಬ್ಬರಗಳನ್ನು ರೈತರ ಬೇಡಿಕೆಯನ್ವಯ ನಿಯಮಿತವಾಗಿ ಪೂರೈಸಬೇಕು. ಇದಕ್ಕಾಗಿ ಕೃಷಿ ಅಧಿಕಾರಿಗಳು ಪ್ರತಿ ತಾಲ್ಲೂಕು/ವಿಧಾನಸಭಾ ಕ್ಷೇತ್ರವಾರು ಭೇಟಿ ನೀಡಿ, ಅಗತ್ಯ ಪ್ರಮಾಣದ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಇರುವ ಬಗ್ಗೆ ಪರಿಶೀಲಿಸಬೇಕು. ಕಳಪೆ ಬೀಜ ಮತ್ತು ರಸಗೊಬ್ಬರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಬಂಧೀಇಸದವರ ವಿರುದ್ಧ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಬೇಕು. ಕಳೆದ ವರ್ಷದಲ್ಲಿ ಕಳಪೆ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿರುವ ಬಾಕಿ ಇರುವ ಪ್ರಕರಣಗಳನ್ನು ಅದಷ್ಟು ಬೇಗನೆ ಇತ್ಯರ್ಥ ಮಾಡುವ ನಿಟ್ಟಿನಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಬೆಳೆ ವಿಮೆ ಕುರಿತು ರೈತರಿಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು. ಗಂಗಾವತಿ ತಾಲ್ಲೂಕಿನ ಸಿದ್ದಾಪುರದಲ್ಲಿ ಕೆಆರ್‌ಐಡಿಎಲ್ ನಿಂದ ನಿರ್ಮಿಸಿರುವ ರೈತ ಸಂಪರ್ಕ ಕೇಂದ್ರ ಕಾಮಗಾರಿ ಕಳಪೆಯಾಗಿದ್ದು, ಈ ಬಗ್ಗೆ ಅನುಷ್ಠಾನ ಏಜೆನ್ಸಿ ಹಾಗೂ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ನಿರ್ಮಾಣ ಕಾಮಗಾರಿಗೆ ತಗುಲಿದ ವೆಚ್ಚವನ್ನು ಅಧಿಕಾರಿಗಳಿಂದ ವಸೂಲಿ ಮಾಡಿ. ಇದರಂತೆ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುವ ಯಾವುದೇ ಸಿವಿಲ್ ಕಾಮಗಾರಿಯನ್ನು ಕಡ್ಡಾಯವಾಗಿ ಥರ್ಡ್ ಪಾರ್ಟಿ ಪರಿಶೀಲನೆಗೆ ಒಳಪಡಿಸಬೇಕು. ರೈತ ಸಂಪರ್ಕ ಕೇಂದ್ರ ಹಾಗೂ ಕೃಷಿ ಕಚೇರಿಗಳಿಗೆ ಭೇಟಿ ನಿಡುವ ರೈತರೊಂದಿಗೆ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಿದರು.

**ತೋಟಗಾರಿಕೆ ಪಾರ್ಕ್ ನಿರ್ಮಾಣಕ್ಕೆ ಕ್ರಮ:** ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರ ವೇಗವಾಗಿ ಬೆಳೆಯುತ್ತಿದೆ. ಅದಕ್ಕೆ ಅನುಗುಣವಾಗಿ ಮಾರುಕಟ್ಟೆಯನ್ನು ಸ್ಥಾಪಿಸುವುದು ನಮ್ಮ ಕರ್ತವ್ಯ. ಅದಕ್ಕಾಗಿ ಈಗಾಗಲೇ ತೋಟಗಾರಿಕೆ ಪಾರ್ಕ್ ನಿರ್ಮಾಣಕ್ಕೆ ಉದ್ದೇಶಿಸಿರುವ ಸಿರವಾರದ ಸುತ್ತಲಿನ ಪ್ರದೇಶದಲ್ಲಿ 194 ಎಕರೆ ಜಮೀನನ್ನು ಗುರುತಿಸಲಾಗಿದ್ದು, ಇದರಲ್ಲಿ 120 ಎಕರೆ ಪ್ರದೇಶ ಸರ್ಕಾರದ್ದಾಗಿದೆ. ಉಳಿದ 74 ಎಕರೆ ಖಾಸಗಿ ಜಮೀನು ಮಾಲೀಕರಿಂದ ಖರೀದಿಸಬೇಕಿದೆ. ರೈತರು ಭೂಮಿ ಕೊಡಲು ಮೀನಮೇಷ ಮಾಡುತ್ತಿರುವುದರಿಂದ ಅವರೊಂದಿಗೆ ಇನ್ನೊಂದು ಸುತ್ತಿನ ಮಾತುಕತೆ ನಡೆಸಿ. ಆಗಲೂ ರೈತರು ಒಪ್ಪದಿದ್ದಲ್ಲಿ ಭುಸ್ವಾದೀನಕ್ಕೆ ಕ್ರಮ ವಹಿಸಿ. ಅದಕ್ಕೂ ಮೊದಲು ಖಾಸಗಿ ಅವರಿಂದ ತೋಟಗಾರಿಕೆ ಪಾರ್ಕ್ ನಿರ್ಮಾಣದಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನಲ್ಲಿ ಮಾರುಕಟೆ ಸ್ಥಾಪಿಸುವ ಕುರಿತು ಚರ್ಚಿಸಿ. ಪರ್ಯಾಯವಾಗಿ ಹಾಗೂ ತಾತ್ಕಾಲಿಕವಾಗಿ ಕಾರಟಗಿ ತಾಲ್ಲೂಕಿನ ನವಲಿ ಗ್ರಾಮದಲ್ಲಿರುವ ರೈಸ್ ಟೆಕ್ನಾಲಜಿ ಪಾರ್ಕ್‌ನಲ್ಲಿ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿ. ಅದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಂದು ಸಚಿವರು ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಿದರು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** ಗಂಗಾವತಿ ಹಾಗೂ ಕುಷ್ಟಗಿ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಥಾಪಿಸಿರುವ ಸಿ.ಟಿ.ಸ್ಕ್ಯಾನ್ ಯಂತ್ರಗ ನಿರ್ವಹಣೆಗೆ ನೇಮಕಗೊಂಡಿದ್ದ ಸಿಬ್ಬಂದಿಗೆ ಬಾಕಿ ಇರುವ ವೇತನ ಪಾವತಿಗೆ ಕ್ರಮ ವಹಿಸಿ. ಜಿಲ್ಲೆಯಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಎಂ.ಬಿ.ಬಿ.ಎಸ್ ವೈದ್ಯರ ಕೊರತೆ ಇದ್ದು, ಶೀಘ್ರವಾಗಿ ವೈದ್ಯರ ನೇಮಕ ಮಾಡಿಕೊಳ್ಳಿ. ಜಿಲ್ಲೆಯ ತಾಲ್ಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯವಿರುವ 100 ಹಾಸಿಗೆ ಆಸ್ಪತ್ರೆ ಹಾಗೂ 30 ಹಾಸಿಗೆ ಆಸ್ಪತ್ರೆಯ ಬಗ್ಗೆ ಪ್ರಸ್ತಾವನೆ ಸಿದ್ದಪಡಿಸಿ, ವರದಿ ಸಲ್ಲಿಸಿ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಿಂಗರಾಜು ಟಿ ಅವರಿಗೆ ಸಚಿವರು ಸೂಚಿಸಿದರು.

ಪತ್ರಿಕೆ, ಮಾಧ್ಯಮಗಳಲ್ಲಿ ಜಿಲ್ಲಾಸ್ಪತ್ರೆ ಬಗ್ಗೆ ಅನೇಕ ಋಣ-ಾತ್ಮಕ ವರದಿಗಳು ಪ್ರಕಟವಾಗುತ್ತಿದ್ದು, ಜಿಲ್ಲಾಸ್ಪತ್ರೆ ವ್ಯವಸ್ಥೆಯನ್ನು ಸರಿಪಡಿಸಲು ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು. ಬೇರೆ ಊರು, ಜಿಲ್ಲೆಗಳಿಂದ ಬರುವ ರೋಗಿಗಳಿಗೆ ಟೋಕನ್ ನೀಡಲು ಹೆಚ್ಚುವರಿ ಕೌಂಟರ್‌ಗಳನ್ನು ತೆರೆಯಬೇಕು. ಕಿಮ್ಸ್‌ಗೆ ದಾಕಲಾಗುವ ರೋಗಿಗಳಿಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆ ಹಾಗೂ ಹೆಚ್ಚಿನ ಚಿಕಿತ್ಸೆಗೆ ಅನಗತ್ಯ ವಿಳಂಬ ಮಾಡದೆ ಕೂಡಲೇ ಅಗತ್ಯ ಚಿಕಿತ್ಸೆ ನೀಡಬೇಕು. ಜಿಲ್ಲಾಸ್ಪತ್ರೆ ಹಾಗೂ ಕಿಮ್ಸ್ ಆವರಣದಲ್ಲಿ ಮಮತೆಯ ತೊಟ್ಟಿಲು ಇಡಲಾಗಿದ್ದು, ಈ ತೊಟ್ಟಿಲಿನಲ್ಲಿ ವಿವಿಧ ಕಾರಣಗಳಿಂದ ಬೇಡವಾದ ಮಗುವನ್ನು ಹಾಕಬಹುದು. ಆ ಮಗುವಿನ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಇದರಿಂದ ಯಾವುದೇ ಪೋಷಕರಿಗೂ ತೊಂದರೆ ಆಗುವುದಿಲ್ಲ. ಈ ಬಗ್ಗೆ ಹೆರಿಗೆಗೆ ದಾಖಲಾಗುವ ಗರ್ಭಿಣಿ ಹಾಗೂ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ. ಇದರಿಂದ ನವಜಾತ ಶಿಶುಗಳ ಮರಣವನ್ನು ತಪ್ಪಿಸಬಹುದು ಎಂದು ಕಿಮ್ಸ್ ನಿರ್ದೇಶಕರಿಗೆ ಸಚಿವರು ತಿಳಿಸಿದರು.

ಕಿಮ್ಸ್ ನೋಂದಣಿ ನವೀಕರಣ ಬಾಕಿ ಇದ್ದು, ಇದರಿಂದ ಕಿಮ್ಸ್ ಗೆ ರೂ.35 ಲಕ್ಷಗಳ ದಂಡವನ್ನು ವಿಧಿಸಲಾಗಿದೆ. ಇದರಲ್ಲಿ ಕಿಮ್ಸ್ ನಿರ್ದೇಶಕರ ಕರ್ತವ್ಯ ಲೋಪ ಕಂಡುಬರುತ್ತಿದ್ದು, ಈ ಬಗ್ಗೆ ಸಮಿತಿ ರಚಿಸಿ, 15 ದಿನಗಳೊಳಗೆ ವರದಿ ಸಲ್ಲಿಸಬೇಕು. ಇನ್ನುಮುಂದೆ ಜಿಲ್ಲಾಸ್ಪತ್ರೆ ಹಾಗೂ ಕಿಮ್ಸ್‌ನಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ವೈದ್ಯರು ಪರಸ್ಪರ ಸಹಕಾರ, ಸಮನ್ವಯದಿಂದ ಕಾರ್ಯನಿರ್ವಹಿಸಿ ರೋಗಿಗಳಿಗೆ ಉತ್ತಮ ಸೇವೆ ಒದಗಿಸಬೇಕು. ಜಿಲ್ಲಾಸ್ಪತ್ರೆಯ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ಕಿಮ್ಸ್ ನಿರ್ದೇಶಕರಿಗೆ ಸಚಿವರು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಸಂಸದರಾದ ಕೆ.ರಾಜಶೇಖರ ಹಿಟ್ನಾಳ್, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ದೊಡ್ಡನಗೌಡ ಪಾಟೀಲ್, ಜಿ.ಜನಾರ್ಧನ ರೆಡ್ಡಿ, ಹೇಮಲತಾ ನಾಯಕ, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೆ.ಡಿ.ಪಿ. ನಾಮನಿರ್ದೇಶಿತ ಸದಸ್ಯರಾದ ಕುರುಗೋಡ ರವಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಮಲ್ಲಪ್ಪ ತೊದಲಬಾಗಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಾಲೂಕುಗಳ ತಹಸೀಲ್ದಾರರು, ತಾಪಂ ಇಓಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

# ಆಶ್ರಯ ಕಾಲೋನಿಯಲ್ಲಿರುವ ಜಾಗ ಗುರುತಿಸಿಕೊಡಲು ಮನವಿ



**ದೇವರಹಿಪ್ಪರಗಿ :** ಬಸವನಬಾಗೇವಾಡಿ ತಾಲೂಕಿನ ಡೋಣೂರ ಗ್ರಾಮದ ಆಶ್ರಯ ಕಾಲೊನಿಯಲ್ಲಿ ಮುಸ್ಲಿಂ ಪ್ರಾರ್ಥನಾ ಮಂದಿರ, ದರ್ಗಾ, ಉರ್ದು ಶಾಲೆ, ಈದ್ಗಾ ಹಾಗೂ ಖಬರಸ್ಥಾನಕ್ಕೆ ಜಾಗೆ ಗುರುತಿಸಿ ಕೊಡಲು ಟಿಪ್ಪು ಕ್ರಾಂತಿ ಸೇನೆ ಹಾಗೂ ಡೋಣೂರ ಗ್ರಾಮದ ಅಂಜುಮನ್ ಕಮೀಟಿ ವತಿಯಿಂದ ತಾಲೂಕ ದಂಡಾಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

ಟಿಪ್ಪು ಕ್ರಾಂತಿ ಸೇನೆಯ ಉತ್ತರ ಕರ್ನಾಟಕ ಅಧ್ಯಕ್ಷ ಖಾಜಂಬರ ನದಾಫ ಮಾತನಾಡಿ ಆಶ್ರಯ ಕಾಲೋನಿಯಲ್ಲಿ ಸರಕಾರದಿಂದ ನಮ್ಮ ಸಮಾಜಕ್ಕಾಗಿ ಜಾಗ ಕಾಯ್ದಿರಿಸಿದ್ದು. ಡೋಣೂರ ಗ್ರಾಮದ ಆಶ್ರಯ ಕಾಲೊನಿಯಲ್ಲಿ ಮುಸ್ಲಿಂ ಸಮುದಾಯದ ಪ್ರಾರ್ಥನಾ ಮಂದಿರ, ದರ್ಗಾ, ಉರ್ದು ಶಾಲೆ, ಈದ್ಗಾ ಹಾಗೂ ಖಬರಸ್ಥಾನಕ್ಕೆ ಜಾಗೆ ಗುರುತಿಸಿ ಕೊಡಬೇಕು ಎಂದು ತಾಲೂಕ ದಂಡಾಧಿಕಾರಿಗಳಲ್ಲಿ ಮನವಿ ಮಾಡಿದರು.

ಗ್ರಾಮದ ಆಶ್ರಯ ಕಾಲನಿಯಲ್ಲಿ ಬೇರೆ ಬೇರೆ ಸಮುದಾಯದವರು ಸ್ವತ: ತಾವೇ ಜಾಗೆಗಳನ್ನು ಗುರುತಿಸಿಕೊಂಡು ಕಬ್ಜಾ ಮಾಡಿಕೊಂಡಿದ್ದಾರೆ ಹಾಗಾಗಿ ನಮ್ಮ ಸಮುದಾಯ ಸ್ವತ: ಜಾಗ ಗುರುತಿಸಲು ಹೋದಲ್ಲಿ ಸಮಸ್ಯೆಯಾಗುವ ಸಂಭವವಿರುವುದರಿಂದ ತಾಲೂಕ ದಂಡಾಧಿಕಾರಿಗಳು ಮುಸ್ಲಿಂ ಸಮಾಜಕ್ಕೆ ಜಾಗ ಗುರುತಿಸಿ ಕೊಡುವ ಮೂಲಕ ಸಮಾಜಕ್ಕೆ ಅನಕೂಲ ಕಲ್ಪಿಸಬೇಕು ಎಂದು ಅವರು ಈ ಸಂದರ್ಭಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಅಮಿನಸಾಬ ಹುಡೆದಗಡ್ಡಿ, ನಾಸೀರ್ ತಾಂಬೋಳಿ, ಅಬಿದ ತಾಂಬೋಳಿ, ಬಂದೇನವಜ್ ಸುತಾರ, ಮಹೇಬೂಬ ಸುತಾರ, ರಹೇಮಾನ ಮುಲ್ಲಾ, ಹಾಶಿಂಸಾಬ ಸುತಾರ, ಸುಲೇಮಾನ್ ಗೌಂಡಿ, ಅಬ್ಬುಸಾಬ ಮುಲ್ಲಾ, ಇಸ್ಮಾಯಿಲ್ ಮುಲ್ಲಾ ಹಾಗೂ ಇನ್ನಿತರರು ಇದ್ದರು.

# ಭಾರತೀಯ ಸಮವಸ್ತ್ರ ಸೇವೆಗಳಿಗೆ ಉಚಿತ ವೃತ್ತಿ ಮಾರ್ಗದರ್ಶನ: ಅರ್ಜಿ ಆಹ್ವಾನ

**ಕೊಪ್ಪಳ :** ಭಾರತೀಯ ಸೇನೆ/ಇತರೆ ಯುನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ(ಬಾಲಕರಿಗೆ ಮಾತ್ರ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2024-25 ನೇ ಸಾಲಿನಲ್ಲಿ ಆಯ್ಕೆಯ ಪೂರ್ವ ಸಿದ್ದತೆ ಬಗ್ಗೆ ಉಚಿತ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿ ನೀಡುತ್ತಿದ್ದು, ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿ ಮತ್ತು ಕುಟುಂಬದ ಒಟ್ಟು ಗರಿಷ್ಠ ವಾರ್ಷಿಕ ಆದಾಯ ಮಿತಿ ಪ್ರವರ್ಗ-1 ರೂ.2.50/- ಲಕ್ಷಗಳು ಹಾಗೂ ಪ್ರವರ್ಗ-2ಎ, 3ಎ, 3ಬಿ ಗಳಿಗೆ ರೂ.1.00/- ಲಕ್ಷ ಮೀರಿರಬಾರದು. ಅಭ್ಯರ್ಥಿಯು 10 ನೇ ತರಗತಿಯನ್ನು ಉತ್ತೀರ್ಣವಾಗಿದ್ದು, ಪ್ರತಿ ವಿಷಯದಲ್ಲಿ ಕನಿಷ್ಠ ಶೇ.33 ಅಂಕಗಳನ್ನು ಪಡೆದಿರಬೇಕು. ಗ್ರೇಡಿಂಗ್ ಸಿಸ್ಟಂ ಇದ್ದಲ್ಲಿ ಮೇಲ್ಕಂಡಂತೆ ಸಮಾನವಾದ ಗ್ರೇಡ್ ಪಡೆದಿರಬೇಕು. ಜನ್ಮ ದಿನಾಂಕ ಮತ್ತು ವಯಸ್ಸು (10ನೇ ತರಗತಿಯ ಅಂಕ ಪಟ್ಟಿಯಲ್ಲಿರುವಂತೆ ಜುಲೈ 10 2024 ಕ್ಕೆ ಅನ್ವಯಿಸುವಂತೆ ಅಭ್ಯರ್ಥಿಯ ವಯಸ್ಸನ್ನು ಪರಿಗಣಿಸಲಾಗುವುದು.) ಅಭ್ಯರ್ಥಿಯು 10 ಜುಲೈ 2004 ರಿಂದ 10 ಜುಲೈ 2007 ರ ನಡುವಿನ ಅವಧಿಯಲ್ಲಿ ಜನಿಸಿರಬೇಕು. ತರಬೇತಿಯನ್ನು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ನೀಡಲಾಗುವುದು. ಅಭ್ಯರ್ಥಿಗಳು ಈ ಮೂರು ಜಿಲ್ಲೆಗಳಲ್ಲಿ ತರಬೇತಿಗೆ ಆಯ್ಕೆ ಮಾಡಿಕೊಳ್ಳುವ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಜುಲೈ 10 ಕೊನೆಯ ದಿನವಾಗಿದ್ದು, ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಯನ್ನು ಇಲಾಖಾ ವೆಬ್-ಸೈಟ್ https://bcwd.karnataka.gov.in ನಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸಹಯವಾಣಿ ಸಂಖ್ಯೆಗಳಾದ ದಕ್ಷಿಣ ಕನ್ನಡ ಜಿಲ್ಲೆ: ದೂ.ಸಂ.0824-2225078, ಉಡುಪಿ ಜಿಲ್ಲೆ: ದೂ.ಸಂ:0820-2574881, ಉತ್ತರ ಕನ್ನಡ ಜಿಲ್ಲೆ:08382-226589 ಹಾಗೂ ಕೇಂದ್ರ ಕಛೇರಿ:8050770004 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ ತಾಲೂಕ ಗ್ಯಾರಂಟಿ ಕಮಿಟಿಯಿಂದ ಸಂಸದ ರಾಜಣ್ಣಗೆ ಗೌರವ

## ಜನರಿಗೆ ಗ್ಯಾರಂಟಿ ಯೋಜನೆ ನಿಲ್ಲಿಸುವ ಮಾತೇ ಇಲ್ಲ: ಸಂಸದ ರಾಜಶೇಖರ



**ಕೊಪ್ಪಳ :** ಕರ್ನಾಟಕದ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರಕಾರ ಬಡವರಿಗೆ ಆರಂಭಿಸಿರುವ ಐದು ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಮಾತೇ ಇಲ್ಲ ಎಂದು ನೂತನ ಸಂಸದ ಕೆ. ರಾಜಶೇಖರ ಹಿಟ್ನಾಳ ಹೇಳಿದರು.

ಅವರು ನಗರದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ನಡೆದ ಕೊಪ್ಪಳ ತಾಲೂಕ ಗ್ಯಾರಂಟಿ ಅನುಷ್ಠಾನ ಸಮಿತಿಯ ಸಭೆಯಲ್ಲಿ ಭಾಗವಹಿಸಿ ಸಮಿತಿಯ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕರ್ನಾಟಕ ಸರಕಾರದ ಬಹುಮುಖ್ಯ ಸಮಾಜಮುಖಿ ಯೋಜನೆಯಾದ ಗ್ಯಾರಂಟಿ ಸ್ಕೀಂಗಳ ಸಮರ್ಪಕ ಅನುಷ್ಠಾನಕ್ಕೆ ಸರಕಾರೇತರ ಸಮಿತಿ ರಚನೆ ಮಾಡಿದ್ದು ಮೂರು ಹಂತದ ಸಮಿತಿಯನ್ನು ರಚಿಸಿ ಜನರಿಗೆ ಆಸರೆಯಾಗಿದೆ, ಬಹುತೇಕರಿಗೆ ಸೌಲಭ್ಯ ಸಿಕ್ಕಿದ್ದು, ಕೆಲವರಿಗೆ ತಾಂತ್ರಿಕ ಕಾರಣಗಳಿಂದ ಏನು ಸೌಲಭ್ಯ ಬಂದಿಲ್ಲ ಶೀಘ್ರ ಸರಿ ಮಾಡಲಾಗುವದು ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಲ್ಲದೇ ಬಿಜೆಪಿಗರ ಸುಳ್ಳು ಮಾತು ನಂಬಬೇಡಿ, ಗ್ಯಾರಂಟಿ ಐದು ವರ್ಷ ಪಕ್ಕಾ ಗ್ಯಾರಂಟಿ ಇರುತ್ತವೆ, ಕೊಪ್ಪಳ ತಾಲೂಕಿನ ಗ್ಯಾರಂಟಿ ಸದಸ್ಯರು ಉತ್ತಮ ಕೆಲಸ ಮಾಡಿದ್ದು, ತಮ್ಮ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿವೆ ಎಂದರು.

ರಾಜ್ಯದ ಜನತೆಗೆ ಶಕ್ತಿ, ಗೃಹ ಜ್ಯೋತಿ, ಅನ್ನ ಭಾಗ್ಯ, ಗೃಹ ಲಕ್ಷ್ಮೀ, ಮತ್ತು ಯುವ ನಿಧಿ ಯೋಜನೆಗಳನ್ನು ಈಗಾಗಲೇ ಜಾರಿಗೊಳಿಸಿದ್ದು, ಸದರಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಮೇಲ್ವಿಚಾರಣೆಗಾಗಿ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಚಿಸಿದ್ದು ಚುನಾವಣೆ ನಂತರ ಮೊದಲ ಸಭೆ ನಡೆಸಿ ಚರ್ಚಿಸಿದರು.

ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಾಲಚಂದ್ರನ್ ಸ್ಯಾಮುವೇಲ್, ತಾಲೂಕ ಪಂಚಾಯತಿ ಕಾರ್ಯನಿರ್ವಾಹಣ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ ದುಂದಪ್ಪ ತುರಾದಿ, ಸದಸ್ಯರುಗಳಾದ ಜ್ಯೋತಿ ಮಂಜುನಾಥ ಗೊಂಡಬಾಳ, ದೇವರಾಜ ನಡುವಿನಮನಿ, ರಾಮಣ್ಣ ಚೌಡ್ಕಿ ಹಟ್ಟಿ, ರಮೇಶ ಹ್ಯಾಟಿ ಭಾಗ್ಯನಗರ, ಅನ್ನದಾನಸ್ವಾಮಿ ಸಾಲಿಮಠ ಬೆಟಗೇರಿ, ಪರಶುರಾಮ ಕೊರವರ, ಸವಿತಾ ಅಶೋಕ ಗೋರಂಟ್ಲಿ, ಮಂಜುನಾಥ ಅಂಗಡಿ, ಎ. ಧರ್ಮರಾಜರಾವ್, ಆನಂದಪ್ಪ ಕಿನ್ನಾಳ, ಲಕ್ಷ್ಮಣ ಡೊಳ್ಳಿನ್ ಮತ್ತು ಅನ್ವರ ಹುಸೇನ್ ಗಡಾದ, ಮಾನವಿ ಪಾಶಾ ಇತರರು ಇದ್ದರು.

# ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರ ಹಾಗೂ ವಿಜಯಪುರದ ಕೆ.ಬಿ.ಎಸ್. ಶಾಲೆ ನಂ.4ಕ್ಕೆ ಜಿ.ಪಂ. ಸಿಇಒ ಭೇಟಿ, ಪರಿಶೀಲನೆ



**ವಿಜಯಪುರ :** ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಜೂನ್ 18 ರಂದು ನಗರದ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷಾ ವ್ಯವಸ್ಥೆ ಹಾಗೂ ವಿಜಯಪುರ ನಗರದ ಕೆ.ಬಿ.ಎಸ್ ಶಾಲೆ ನಂ.4ರಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದರು.

ನಗರದ ಪಿ.ಡಿ.ಜೆ ಪ್ರೌಢ ಶಾಲೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆ–2ರ ಗಣಿತ ವಿಷಯದ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳ ಹಾಜರಾತಿ, ಪರೀಕ್ಷಾ ಕೇಂದ್ರಗಳ ಕೊಠಡಿ, ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ, ಅಗತ್ಯ ಇರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಆಸನದ ವ್ಯವಸ್ಥೆ, ಪರೀಕ್ಷಾ ಕೇಂದ್ರದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಿರುವ ಕುರಿತು, ಪರೀಕ್ಷಾ ಕೇಂದ್ರದ ಎಲ್ಲಾ ಕೊಠಡಿಗಳಿಗೆ ಸಿ.ಸಿ.ಟಿವಿ ಅಳವಡಿಸಿರುವುದೂ ಸೇರಿದಂತೆ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಭದ್ರತಾ ವ್ಯವಸ್ಥೆ ಹಾಗೂ ಆರೋಗ್ಯ ಕಾರ್ಯಕರ್ತರ ನಿಯೋಜನೆ ಮಾಡಿರುವ ಕುರಿತು ಪರಿಶೀಲನೆ ನಡೆಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಸಮಸ್ಯೆಗಳು ಉಂಟಾಗದಂತೆ ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ಶಿಸ್ತಿನಿಂದ ನಡೆಸುವುದು, ಪ್ರಶಾಂತ ವಾತಾವರಣದಲ್ಲಿ ಆತ್ಮ ವಿಶ್ವಾಸದಿಂದ ಪರೀಕ್ಷೆ ಬರೆಯುವ ವಿದ್ಯಾರ್ಥಿ ಸ್ನೇಹಿ ಪರೀಕ್ಷಾ ವ್ಯವಸ್ಥೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಪರೀಕ್ಷಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿ.ಪಂ ಸಿಇಒ ಅವರು ನಗರದ ಕೆ.ಬಿ.ಎಸ್. ಶಾಲೆ ನಂ.04 ಭೇಟಿ ನೀಡಿ ಶಾಲಾ ಕೊಠಡಿ, ನೆಲಹಾಸು ವೀಕ್ಷಿಸಿದ ಅವರು, ಪ್ರಥಮಾದ್ಯತೆ ಮೇರೆಗೆ ಕೊಠಡಿಯ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಸೂಚಿಸಿದರು. ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳನ್ನು ಗುರುತಿಸಿ ವರದಿ ನೀಡಬೇಕು. ವಿದ್ಯುತ್ ಹಾಗೂ ಶೌಚಾಲಯ ವ್ಯವಸ್ಥೆ, ಶಾಲಾ ಕೊಠಡಿಗಳಿಗೆ ಸುಣ್ಣ–ಬಣ್ಣ ಹಾಗೂ ಶಾಲಾ ಕಂಪೌಂಡ್ ಗೋಡೆ ನಿರ್ಮಾಣ, ಅನವಶ್ಯಕ ಸಾರ್ವಜನಿಕರು ಶಾಲಾ ಆವರಣದೊಳಗಡೆ ಬರದಂತೆ ಕ್ರಮ ಕೈಗೊಳ್ಳಬೇಕು. ಶಾಲಾ ಶೌಚಾಲಯ ಹಾಗೂ ಶಾಲೆಯ ಒಳಾಂಗಣ ಮತ್ತು ಹೊರಾಂಗಣ ಆವರಣ ಸ್ವಚ್ಛತೆಗೆ ಕ್ರಮವಹಿಸಲು ವಿಜಯಪುರ ಮಹಾನಗರಪಾಲಿಕೆಯ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ತಕ್ಷಣ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ, ಆಹಾರ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಯಾವುದೇ ಸಮಸ್ಯೆ ಬಾರದಂತೆ ನೋಡಿಕೊಳ್ಳಲು ನಗರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಇವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ಇಲಾಖೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸುವುದು ಹಾಗೂ ಈ ಶಾಲೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದರೂ ಕೂಡಲೇ ತಮ್ಮ ಗಮನಕ್ಕೆ ತರುವಂತೆಯೂ ಸಮಸ್ಯೆ ಇತ್ಯರ್ಥ ಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಶಾಲೆಯ ಮುಖ್ಯ ಶಿಕ್ಷಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಉಮಾದೇವಿ ಸೊನ್ನದ, ನಗರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಹಾಗೂ ಇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ವಿಭಾಗ ಮಟ್ಟದ ಕಂದಾಯ ಇಲಾಖೆ ಅಧಿಕಾರಿಗಳ ಸಭೆ

## ಸಂಭವನೀಯ ಪ್ರವಾಹ ನಿರ್ವಹಣೆ: ರಕ್ಷಣಾ ತಂಡಗಳು ಸದಾ ಸಿದ್ಧವಾಗಿರಬೇಕು: ಸಚಿವ ಕೃಷ್ಣ ಭೈರೇಗೌಡ

**ಬೆಳಗಾವಿ :** ಸಂಭವನೀಯ ಪ್ರವಾಹ ನಿರ್ವಹಣೆಗೆ ಎಲ್ಲ ಜಿಲ್ಲಾಡಳಿತಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ನದಿಯ ಒಳಹರಿವು ಹಾಗೂ ಮಳೆಯ ಪ್ರಮಾಣದ ಮೇಲೆ ನಿರಂತರ ನಿಗಾ ವಹಿಸುವ ಮೂಲಕ ಜನ ಹಾಗೂ ಜಾನುವಾರಿಗಳ ಜೀವಹಾನಿ ತಡೆಯಲು ಮುನ್ನೆಚ್ಚರಿಕೆ ವಹಿಸಬೇಕು ಎಂದು ಕಂದಾಯ ಇಲಾಖೆಯ ಸಚಿವರಾದ ಕೃಷ್ಣ ಭೈರೇಗೌಡ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಂಭವನೀಯಪ್ರವಾಹನಿರ್ವಹಣೆ,ನೈರುತ್ಯ ಮುಂಗಾರು ಸಿದ್ಧತೆ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಸುವರ್ಣ ವಿಧಾನಸೌಧದಲ್ಲಿ ಶನಿವಾರ(ಜೂ.15) ನಡೆದ ಬೆಳಗಾವಿ ವಿಭಾಗದ ಜಿಲ್ಲಾಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನಾಹುತ ಸಂಭವಿಸಿದಾಗ ರಕ್ಷಣಾ ತಂಡಗಳು ಯಾವ ರೀತಿ ಕಾರ್ಯಾಚರಣೆ ಕೈಗೊಳ್ಳಬೇಕು ಎಂಬುದರ ಕುರಿತು ಕಂದಾಯ, ಪೊಲೀಸ್, ಅಗ್ನಿಶಾಮಕ ಸೇರಿದಂತೆ ಸಂಬಂಧಿಸಿದ ಇಲಾಖೆಗಳು ಮುಂಚಿತವಾಗಿಯೇ ಸಮನ್ವಯತೆ ಸಾಧಿಸಬೇಕು.

ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೇ ಪ್ರವಾಹ ಬಾಧಿತಗೊಳ್ಳಲಿರುವ ತಾಲ್ಲೂಕುಗಳ ಮಟ್ಟದಲ್ಲೂ ಇಂತಹ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಪ್ರವಾಹ ಮಾತ್ರವಲ್ಲದೇ ಮನೆಕುಸಿತ ಮತ್ತಿತರ ತುರ್ತು ಸಂದರ್ಭಗಳಲ್ಲಿ ತುರ್ತು ಕ್ರಮಕ್ಕೆ ರಕ್ಷಣಾ ವ್ಯವಸ್ಥೆ ಮತ್ತು ತಂಡಗಳು ಸಜ್ಜಾಗಿರಬೇಕು ಎಂದು ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಪ್ರವಾಹ ನಿರ್ವಹಣೆ ಕುರಿತು ಜಿಲ್ಲಾ, ತಾಲ್ಲೂಕು ಹಾಗೂ ಪ್ರವಾಹದಿಂದ ಬಾಧಿತಗೊಳ್ಳಲಿರುವ ಗ್ರಾಮಗಳ ಮಟ್ಟದಲ್ಲಿ ಅಣಕು ಕಾರ್ಯಾಚರಣೆ ನಡೆಸಬೇಕು. ಆಗಾಗ ಸಭೆ ನಡೆಸುವ ಮೂಲಕ ತಂಡಗಳನ್ನು ಸದಾ ಜಾಗೃತವಾಗಿಡಬೇಕು.

ಜಿಲ್ಲಾ ಹಂತದಲ್ಲಿರುವ ಸಮಿತಿಗಳನ್ನು ಪ್ರಬಾಹಬಾಧಿತಗೊಳ್ಳಲಿರುವ ತಾಲ್ಲೂಕು ಮತ್ತು ಪಂಚಾಯಿತಿ ಮಟ್ಟಕ್ಕೂ ವಿಸ್ತರಿಸಬೇಕು ಎಂದು ಸಚಿವರು ತಿಳಿಸಿದರು.

ಹಿಂದಿನ ವರ್ಷಗಳಲ್ಲಿ ಸಂಭವಿಸಿದ ಪ್ರವಾಹ ಹಾನಿ ಸರಿಪಡಿಸಲು ನೀಡಲಾಗಿರುವ ಅನುದಾನವನ್ನು ತಕ್ಷಣವೇ ಬಳಕೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಪ್ರವಾಹ ನಿರ್ವಹಣೆ ಪೂರ್ವಸಿದ್ಧತೆ ಕುರಿತು ಮಾತನಾಡಿದ ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು, "ಕೊಯ್ನಾದಿಂದ ಬಿಡುಗಡೆ ಮಾಡಲಾದ 3.44 ಲಕ್ಷ ಕ್ಯೂಸೆಕ್ ನೀರು ಹಾಗೂ ಮಳೆಯಿಂದ ಹಿಂದೆ ಪ್ರವಾಹ ಉಂಟಾಗಿತ್ತು. ಆದ್ದರಿಂದ ನೀರು ಬಿಡುಗಡೆ ಕುರಿತು ಮಹಾರಾಷ್ಟ್ರದ ಜತೆ ಸಮನ್ವಯ ಸಾಧಿಸಿಕೊಂಡು ಉಭಯ ರಾಜ್ಯಗಳ ಉನ್ನತಮಟ್ಟದ ಸಮಿತಿ ರಚಿಸಿಕೊಂಡು ಜಲಾಶಯಗಳ ನೀರಿನ ಮಟ್ಟ ನಿರ್ವಹಣೆ ಮಾಡುವುದರಿಂದ ಪ್ರವಾಹ ಪರಿಸ್ಥಿತಿ ತಡೆಗಟ್ಟಬಹುದು" ಎಂದು ತಿಳಿಸಿದರು.

ಸಂಭವನೀಯ ಪ್ರವಾಹ ಪರಿಸ್ಥಿತಿ ಎದುರಿಸಲು ಜಿಲ್ಲಾಡಳಿತದ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

ಧಾರವಾಡ ಜಿಲ್ಲಾಧಿಕಾರಿ ದಿವ್ಯಪ್ರಭು ಮಾತನಾಡಿ, ಧಾರವಾಡ ಜಿಲ್ಲೆಯಲ್ಲಿ ಬೆಣ್ಣಿಹಳ್ಳ ಹಾಗೂ ತುಪ್ಪರಿಹಳ್ಳದ ವ್ಯಾಪ್ತಿಯಲ್ಲಿ ಮಾತ್ರ ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ.

ಪ್ರವಾಹದಿಂದ ಬಾಧಿತಗೊಳ್ಳಲಿರುವ ಪ್ರದೇಶ ಹಾಗೂ ಜನಸಂಖ್ಯೆಯನ್ನು ಈಗಾಗಲೇ ಸಮೀಕ್ಷೆ ಮೂಲಕ ಗುರುತಿಸಲಾಗಿದೆ. ಗರಿಷ್ಠ ಪ್ರವಾಹ ಉಂಟಾದರೆ 85 ಸಾವಿ ಹೆಕ್ಟೇರ್ ಕೃಷಿ ಜಮೀನಿನಲ್ಲಿ ನೀರು ನಿಲ್ಲಬಹುದು. ಈ ಎಲ್ಲ ಸಾಧ್ಯತೆಗಳನ್ನು ಗಮನಿಸಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ವಿವರಿಸಿದರು.

ಅದೇ ರೀತಿಯಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿ ಜಾನಕಿ, ಉತ್ತರ ಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಹಾಗೂ ಹಾವೇರಿ ಜಿಲ್ಲಾಧಿಕಾರಿಗಳು ಸಂಭವನೀಯ ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸಚಿವರಿಗೆ ವಿವರಿಸಿದರು.

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರಕುಮಾರ್ ಖಟಾರಿಯಾ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ(ನೋಂದಣಿ ಮತ್ತು ಸಾಮಾಜಿಕಭದ್ರತೆ)ಗಳಾದ ವಿ.ರಶ್ಮಿಮಹೇಶ್, ಕಂದಾಯ ಇಲಾಖೆಯ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕ ಇಲಾಖೆಯ ಆಯುಕ್ತರಾದ ಮಮತಾ ಬಿ.ಆರ್., ಪ್ರಾದೇಶಿಕ ಆಯುಕ್ತರಾದ ಸಂಜಯ ಶೆಟ್ಟೆಣ್ಣವರ ಸಭೆಯಲ್ಲಿ ಉಪಸ್ಥಿತರಿದ್ದರು.

# ರಕ್ಷಣಾ ಕ್ಷೇತ್ರದಲ್ಲಿ ಭವಿಷ್ಯದ ತಾಂತ್ರಿಕ ಪ್ರವೃತ್ತಿಗಳು ಕುರಿತು ಎರಡು ದಿನಗಳ ವಿಚಾರ ಸಂಕಿರಣ ಯಶಸ್ವಿ




**ಬೆಂಗಳೂರು :** ಸಿಐಐ ಇನ್ಸಿಟ್ಯೂಟ್ ಆಫ್ ಕ್ವಾಲಿಟಿ (ಸಿಐಐ ಐಕ್ಯೂ) ಮತ್ತು ಡಿಫೆನ್ಸ್ ಇನ್ಸಿಟ್ಯೂಟ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್ (ಡಿಐಕ್ಯೂಎ) ಜಂಟಿಯಾಗಿ ರಕ್ಷಣಾ ಕ್ಷೇತ್ರದಲ್ಲಿ ಭವಿಷ್ಯದ ತಾಂತ್ರಿಕ ಪ್ರವೃತ್ತಿಗಳು ಕುರಿತು ಎರಡು ದಿನಗಳ ವಿಚಾರ ಸಂಕಿರಣವನ್ನು 2024ರ ಜೂನ್ 20 ಮತ್ತು 21ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

ರಕ್ಷಣಾ ಉತ್ಪಾದನೆಯಲ್ಲಿ ಒಡಂಬಡಿಕೆಯನ್ನು ಉತ್ತೇಜಿಸಲು ಉತ್ಪಾದನೆ, ಗುಣಮಟ್ಟ ಮತ್ತು ನಾವೀನ್ಯತೆಗಳಲ್ಲಿನ ಇತ್ತೀಚಿನ ತಾಂತ್ರಿಕ ಪ್ರವೃತ್ತಿಗಳನ್ನು ಸಹಕರಿಸಲು ಮತ್ತು ಅಳವಡಿಸಿಕೊಳ್ಳಲು ರಕ್ಷ ಣಾ ಉತ್ಪಾದನೆ, ಪೂರೈಕೆದಾರರು, ಪಿಎಸ್ಯುಗಳು, ಖಾಸಗಿ ಕೈಗಾರಿಕೆಗಳು ಮತ್ತು ಡಿಜಿಕ್ಯೂಎ ಸಂಸ್ಥೆಗಳ ನಾಯಕರಿಗೆ ಸಾಮಾನ್ಯ ಜ್ಞಾನ ವೇದಿಕೆಯನ್ನು ಒದಗಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿತ್ತು.

ಸಿಐಐ–ಐಕ್ಯೂ ಕಾರ್ಯನಿರ್ವಾಹಕ ನಿರ್ದೇಶಕ ಶ್ರೀ ವಿಪಿನ್ ಸಾಹ್ನಿ, ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು, ನಂತರ ಡಿಐಕ್ಯೂಎ ನಿರ್ದೇಶಕ ಡಾ.ಎನ್.ಕೃಷ್ಣ ಮೂರ್ತಿ ಉದ್ದೇಶ ಕುರಿತು ವಿವರಿಸಿರು. ದಿಕ್ಸೂಚಿ ಭಾಷಣ ಮಾಡಿದ ವಿಶೇಷ ಡಿಜಿಕ್ಯೂಎ ಶ್ರೀ ಎನ್.ಮನೋಹರನ್ ಅವರು, ಇತ್ತೀಚಿನ ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಬಳಸಿಕೊಂಡು ರಕ್ಷಣಾ ಉತ್ಪಾದನೆಯಲ್ಲಿ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳುವ ನಿರ್ಣಾಯಕತೆ ಮತ್ತು ಅಗತ್ಯತೆಯ ಬಗ್ಗೆ ಪ್ರತಿನಿಧಿಗಳಿಗೆ ಮನವರಿಕೆ ಮಾಡಿದರು.

ತಜ್ಞರು, ಉದ್ಯಮದ ನಾಯಕರು ಮತ್ತು ನಾವೀನ್ಯಕಾರರು ಸೇರಿದಂತೆ 60ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ ಸೆಮಿನಾರ್‌ನಲ್ಲಿ, ರಕ್ಷಣಾ ಉತ್ಪಾದನೆ ಮತ್ತು ಗುಣಮಟ್ಟದ ಅಭ್ಯಾಸಗಳು, ಡಿಜಿಟಲ್ ರೂಪಾಂತರವನ್ನು ಪ್ರೇರೇಪಿಸುವ ಅಭ್ಯಾಸಗಳು ಮತ್ತು ರಕ್ಷಣಾ ಉತ್ಪಾದನಾ ಪರಿಸರ ವ್ಯವಸ್ಥೆಯಲ್ಲಿ ಐಎನ್ಡಿ 4.0 ರ ಪಾತ್ರದ ಬಗ್ಗೆ ಪ್ರಮುಖ ಗಮನ ಹರಿಸುವ ವಿಷಯಗಳ ವಿಶಾಲ ವ್ಯಾಪ್ತಿಯನ್ನು ಒಳಗೊಂಡ ಹಲವಾರು ಒಳನೋಟದ ಅಧಿವೇಶನಗಳನ್ನು ಒಳಗೊಂಡಿತ್ತು. ಸೈಬರ್ ಭದ್ರತೆ, ಅತ್ಯಾಧುನಿಕ ಉತ್ಪಾದನಾ ಅಭ್ಯಾಸಗಳು ಮತ್ತು ರಕ್ಷಣಾ ಪೂರೈಕೆ ಸರಪಳಿ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವ ಕುರಿತು ಆಸಕ್ತಿದಾಯಕ ಅಧಿವೇಶನಗಳನ್ನು ಸಹ ಆಯೋಜಿಸಲಾಗಿತ್ತು.

ಡಿಆರ್ಡಿಒ, ಡಿಜಿಕ್ಯೂಎ, ಸಿಎಂಟಿಐ, ಬಿಇಎಲ್ ಮತ್ತು ಖಾಸಗಿ ಕೈಗಾರಿಕೆಗಳಾದ ಎಸ್‌ಎಪಿ ಟೆಕ್ನಾಲಜೀಸ್, ಐಬಿಎಂ, ಟಿವಿಎಸ್, ಎಲ್ ಟಿ, ಟಿಎಎಸ್ಎಲ್ ಮತ್ತು ವಿಡಿಎಂಎ ಮತ್ತು ಸಿಐಐ–ಐಕ್ಯೂನಂತಹ ಕೈಗಾರಿಕಾ ಸಂಘಗಳ ತಜ್ಞರು ರಕ್ಷ ಣಾ ಭವಿಷ್ಯವನ್ನು ರೂಪಿಸುವ ಉದಯೋನ್ಮುಖ ತಂತ್ರಜ್ಞಾನಗಳ ಶ್ರೇಣಿಯ ಬಗ್ಗೆ ಪ್ರತಿನಿಧಿಗಳಿಗೆ ಸಮಗ್ರ ಮಾಹಿತಿ ನೀಡಿದರು.

ರಕ್ಷಣಾ ಉತ್ಕೃಷ್ಟತೆ ಮತ್ತು ಆತ್ಮನಿರ್ಭರ ಭಾರತವನ್ನು ಸಾಧಿಸುವ ರಾಷ್ಟ್ರೀಯ ಉದ್ದೇಶಗಳೊಂದಿಗೆ ಹೊಂದಿಕೆಯಾಗುವ ದೃಢವಾದ, ಸ್ವಾವಲಂಬಿ ರಕ್ಷಣಾ ವಲಯವನ್ನು ನಿರ್ವಹಿಸುವಲ್ಲಿ ನಿರಂತರ ತಾಂತ್ರಿಕ ವಿಕಾಸದ ಮಹತ್ವವನ್ನು ಈ ವಿಚಾರ ಸಂಕಿರಣವು ಸೂಚಿಸಿತು ಮತ್ತು ಪ್ರತಿನಿಧಿಗಳಿಂದ ಅಗಾಧ ಪ್ರತಿಕ್ರಿಯೆಗಳು ವ್ಯಕ್ತವಾಯಿತು.

# ಇಂದಿನ ಭಾರತದಲ್ಲಿ ಪಸ್ಮಾಂಡ ಕಾರಣದ ಪ್ರಸ್ತುತತೆ

ವ್ಯಾಪಕವಾಗಿ ತಿಳಿದಿರುವಂತೆ, ವರ್ಣ ಮತ್ತು ಜಾತಿಯು ಸಾಂಪ್ರದಾಯಿಕ ಭಾರತೀಯ ಸಮಾಜಕ್ಕೆ ಅಡಿಪಾಯವಾಗಿ ಕಾರ್ಯನಿರ್ವಹಿಸಿತು.

ಸುದೀರ್ಘ ಇತಿಹಾಸ ಮತ್ತು ವರ್ಷಗಳಲ್ಲಿ ಹಲವಾರು ಬದಲಾವಣೆಗಳ ಹೊರತಾಗಿಯೂ, ಜಾತಿ ಇನ್ನೂ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟಿದೆ

ನಮ್ಮ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ–ಆರ್ಥಿಕ ವ್ಯವಸ್ಥೆಗಳಲ್ಲಿ ಸಂಸ್ಥೆ. ಭಾರತದ ಮುಸ್ಲಿಂ ಸಮುದಾಯವು ಏಕರೂಪದಿಂದ ದೂರವಿದೆ. ಅದರೊಳಗೆ ಒಂದು ವಿಶಿಷ್ಟವಾದ ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುವ ಪಸ್ಮಾಂಡಸ್ ಎಂದು ಕರೆಯಲ್ಪಡುವ ಒಂದು ಗಮನಾರ್ಹ ವಿಭಾಗವಿದೆ. ಇಂದಿನ ಭಾರತದಲ್ಲಿ ಪಸ್ಮಾಂಡದ ಕಾರಣ ಮತ್ತು ಅದರ ಪ್ರಸ್ತುತತೆಯನ್ನು ಅರ್ಥಮಾಡಿಕೊಳ್ಳುವುದು ನಿಜವಾದ ಸಾಮಾಜಿಕ–ಧಾರ್ಮಿಕ ಸಮಾನತೆಯನ್ನು ಸಾಧಿಸಲು ನಿರ್ಣಾಯಕವಾಗಿದೆ. ಭಾರತದಲ್ಲಿ ಮುಸ್ಲಿಮರು ಒಂದು ಸಾವಿರ ವರ್ಷಗಳಿಂದ ಉಪಖಂಡದ ಇತಿಹಾಸದ ಭಾಗವಾಗಿದ್ದಾರೆ. ಭಾರತದಲ್ಲಿನ ಬಹುಪಾಲು ಮುಸ್ಲಿಮರು ಪೂರ್ವ ಅಸ್ತಿತ್ವದಲ್ಲಿರುವ ಸಮುದಾಯಗಳಿಂದ ಮತಾಂತರಗೊಂಡಿದ್ದಾರೆ ಎಂದು ಐತಿಹಾಸಿಕ ದಾಖಲೆಗಳು ಹೇರಳವಾಗಿ ಸ್ಪಷ್ಟಪಡಿಸುತ್ತವೆ. ಮಧ್ಯ ಏಷ್ಯಾದಲ್ಲಿ ಮೂಲವನ್ನು ಹೊಂದಿರುವ ಉಳಿದ ಮುಸ್ಲಿಂ ಗುಂಪುಗಳು ಶತಮಾನಗಳ ಹಿಂದೆ ಇಲ್ಲಿಗೆ ಆಗಮಿಸಿವೆ ಮತ್ತು ಈಗ ಉಪಖಂಡದ ಸಮಾಜದಲ್ಲಿ ಸೇರಿಕೊಂಡಿವೆ. ಇಸ್ಲಾಂಗೆ ಮತಾಂತರಗೊಂಡರೂ ಹೊಸ ಧಾರ್ಮಿಕ ಸಮುದಾಯಕ್ಕೆ ಪ್ರವೇಶವನ್ನು ನೀಡುತ್ತದೆ ಮತ್ತು

ನಂಬಿಕೆ ವ್ಯವಸ್ಥೆ, ಅದು ಒಬ್ಬರ ಜಾತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಪರಿವರ್ತನೆಯು ವ್ಯಕ್ತಿಯ ಉದ್ಯೋಗವನ್ನು ಬದಲಾಯಿಸಲು ಸಾಧ್ಯವಿಲ್ಲ,

ಅವರ ಆಸ್ತಿ ಅಥವಾ ಅದರ ಕೊರತೆ, ಅವರ




ನೆರೆಹೊರೆಯವರ ಗ್ರಹಿಕೆ ಅಥವಾ ಅವರ ಸಾಮಾಜಿಕ ಶ್ರೇಣಿ.

ಇಸ್ಲಾಂಗೆ ಮತಾಂತರಗೊಳ್ಳುವ ಜನರು ಹೊಸ ಧಾರ್ಮಿಕ ಗ್ರಂಥವನ್ನು ಸ್ವೀಕರಿಸುತ್ತಾರೆ ಮತ್ತು ಅವರು ದೇವರಲ್ಲಿ ಬದಲಾವಣೆಯನ್ನು ನೋಡುತ್ತಾರೆ

ಹಿಂದೆ ಪೂಜೆ ಮಾಡಲಾಯಿತು. ಜನರು ಇದರಲ್ಲಿ ನೈತಿಕ ಸೌಕರ್ಯವನ್ನು ಕಂಡುಕೊಳ್ಳಬಹುದು. ಆದಾಗ್ಯೂ, ನಿಮ್ಮ ಬದಲಾವಣೆಯಂತೆಯೇ ಧರ್ಮ ಅಥವಾ ಬೈಬಲ್ ನಿಮ್ಮ ಚರ್ಮದ ಬಣ್ಣವನ್ನು ಬದಲಾಯಿಸುವುದಿಲ್ಲ, ಅದು ವ್ಯಕ್ತಿಯ ಜಾತಿ ಆಧಾರಿತವನ್ನು ಬದಲಾಯಿಸಲು ಸಾಧ್ಯವಿಲ್ಲ ವೃತ್ತಿ, ಕೌಶಲ್ಯಗಳು, ಆನುವಂಶಿಕತೆ, ನೆಟ್ವರ್ಕ್ಗಳು ಅಥವಾ ಆರೋಗ್ಯ.

ಪಸ್ಮಾಂಡ ಮುಸ್ಲಿಮರು ಎದುರಿಸುತ್ತಿರುವ ಜಾತಿ ಆಧಾರಿತ ತಾರತಮ್ಯ ಮತ್ತು ಸಾಮಾಜಿಕ ಆರ್ಥಿಕ ಅಭಾವದ ನೈಜ ಸಮಸ್ಯೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲಾಗುತ್ತದೆ. ಇದು ಅಂಚಿನಲ್ಲಿರುವ ಸಮುದಾಯದ ನಿಜವಾದ ಕುಂದುಕೊರತೆಗಳನ್ನು ದುರ್ಬಲಗೊಳಿಸುವುದು ಮಾತ್ರವಲ್ಲದೆ ಮುಸ್ಲಿಂ ಸಮುದಾಯದೊಳಗೆ ಒಡಕುಗಳನ್ನು ಶಾಶ್ವತಗೊಳಿಸುತ್ತದೆ. ಸಾಚಾರ್ ಸಮಿತಿ ವರದಿ (2006) ಮತ್ತು ರಂಗನಾಥ ಮಿಶ್ರಾ ಆಯೋಗದ ವರದಿ (2007) ಸೇರಿದಂತೆ ಅಧ್ಯಯನಗಳು ಮತ್ತು ವರದಿಗಳು ಪಸ್ಮಾಂಡ ಮುಸ್ಲಿಮರು ಎದುರಿಸುತ್ತಿರುವ ಸಾಮಾಜಿಕ–ಆರ್ಥಿಕ ಅಸಮಾನತೆಗಳನ್ನು ಎತ್ತಿ ತೋರಿಸಿವೆ. ಮೇಲ್ಜಾತಿ ಮುಸ್ಲಿಮರು (ಅಶ್ರಫ್) ಮತ್ತು ಹಿಂದೂಗಳಲ್ಲಿ ದಲಿತರು ಮತ್ತು ಔಃಅ ಗಳಂತಹ ಇತರ ಅಂಚಿನಲ್ಲಿರುವ ಸಮುದಾಯಗಳಿಗೆ ಹೋಲಿಸಿದರೆ ಪಸ್ಮಾಂಡ ಸಮುದಾಯವು ಶಿಕ್ಷಣ, ಉದ್ಯೋಗ ಮತ್ತು ಮೂಲಭೂತ ಸೌಕರ್ಯಗಳ ಪ್ರವೇಶದಲ್ಲಿ ಹಿಂದುಳಿದಿದೆ ಎಂದು ಈ ವರದಿಗಳು ಬಹಿರಂಗಪಡಿಸುತ್ತವೆ. ಈ ಸಂಶೋಧನೆಗಳ ಹೊರತಾಗಿಯೂ, ಅವರ ನಿರ್ದಿಷ್ಟ ಅಗತ್ಯಗಳನ್ನು ತಿಳಿಸುವ ಉದ್ದೇಶಿತ ನೀತಿಗಳ ಕೊರತೆಯಿದೆ.

ಬಹುಮತವನ್ನು ಹೊಂದಿದ್ದರೂ, ಪಾಸ್ಮಂದಾಸ್ ಐತಿಹಾಸಿಕವಾಗಿ ಗಮನಾರ್ಹ ರಾಜಕೀಯ ಪ್ರಾತಿನಿಧ್ಯವನ್ನು ಹೊಂದಿಲ್ಲ. ಬಲವಾದ ಧ್ವನಿಯ ಈ ಅನುಪಸ್ಥಿತಿಯು ಅವರ ನಿರ್ದಿಷ್ಟ ಅಗತ್ಯಗಳನ್ನು ಪರಿಹರಿಸಲು ಮತ್ತು ಸಂಪನ್ಮೂಲಗಳ ಅವರ ಸರಿಯಾದ ಪಾಲನ್ನು ಪಡೆಯುವ ಪ್ರಯತ್ನಗಳನ್ನು ಮತ್ತಷ್ಟು ಅಡ್ಡಿಪಡಿಸಿದೆ. ಹೆಚ್ಚುವರಿಯಾಗಿ, ಪಸ್ಮಾಂಡ ನಿರೂಪಣೆಯು ಸಾಮಾನ್ಯವಾಗಿ ವಿಶಾಲವಾದ "ಮುಸ್ಲಿಂ" ಗುರುತಿನೊಳಗೆ ಸೇರಿಕೊಳ್ಳುತ್ತದೆ, ಅವರ ವಿಶಿಷ್ಟ ಅನುಭವಗಳು ಮತ್ತು ಆಕಾಂಕ್ಷೆಗಳನ್ನು ಮರೆಮಾಚುತ್ತದೆ. ಪಸ್ಮಾಂಡಗಳ ಅಂಚಿನಲ್ಲಿರುವಿಕೆಯು ಭಾರತದ ಸಾಮಾಜಿಕ ರಚನೆ ಮತ್ತು ಪ್ರಜಾಪ್ರಭುತ್ವದ ಆದರ್ಶಗಳಿಗೆ ವ್ಯಾಪಕವಾದ ಪರಿಣಾಮಗಳನ್ನು ಹೊಂದಿದೆ. ಭಾರತದಲ್ಲಿ ನಿಜವಾದ ಸಾಮಾಜಿಕ ನ್ಯಾಯವನ್ನು ಸಾಧಿಸಲು ಅವರ ಉನ್ನತಿ ಅತ್ಯಗತ್ಯ. ಮುಸ್ಲಿಂ ಸಮುದಾಯದ ಒಂದು ದೊಡ್ಡ ವಿಭಾಗವು ಬಡತನ ಮತ್ತು ಹೊರಗಿಡುವಿಕೆಯಲ್ಲಿ ಸಿಕ್ಕಿಹಾಕಿಕೊಂಡಿದೆ, ಇದು ರಾಷ್ಟ್ರದ ಒಟ್ಟಾರೆ ಪ್ರಗತಿಗೆ ಅಡ್ಡಿಯಾಗಿದೆ. ಸಾಮಾಜಿಕ–ಆರ್ಥಿಕ ಅಭಾವ ಮತ್ತು ಆಮೂಲಾಗ್ರೀಕರಣದ ನಡುವಿನ ಪರಸ್ಪರ ಸಂಬಂಧವನ್ನು ಅಧ್ಯಯನಗಳು ತೋರಿಸಿವೆ. ಕುಂದುಕೊರತೆಗಳನ್ನು ಬಳಸಿಕೊಳ್ಳುವ ಉಗ್ರಗಾಮಿ ನಿರೂಪಣೆಗಳನ್ನು ಎದುರಿಸಲು ಪಸ್ಮಾಂಡಗಳಿಗೆ ಅಧಿಕಾರ ನೀಡುವುದು ಸಹಾಯ ಮಾಡುತ್ತದೆ. ಹೆಚ್ಚು ಒಳಗೊಳ್ಳುವ ಮುಸ್ಲಿಂ ಸಮುದಾಯವು ಭಾರತದ ಜಾತ್ಯತೀತ ಗುರುತನ್ನು ಬಲಪಡಿಸುತ್ತದೆ. ಒಂದು ಮಹತ್ವದ ವಿಭಾಗವು ತಮ್ಮ ಧರ್ಮದೊಳಗೆ ತಮ್ಮ ಜಾತಿಯ ಹಿನ್ನೆಲೆಯ ಆಧಾರದ ಮೇಲೆ ಅಂಚಿನಲ್ಲಿದೆ ಎಂದು ಭಾವಿಸಿದಾಗ, ಅದು ಎಲ್ಲರಿಗೂ ಸಮಾನವಾಗಿ ಕಾಣುವ ಜಾತ್ಯತೀತ ತತ್ವವನ್ನು ದುರ್ಬಲಗೊಳಿಸುತ್ತದೆ.

ಪಸ್ಮಾಂಡ ಕಾರಣ ಕೇವಲ ಒಂದು ನಿರ್ದಿಷ್ಟ ಸಮುದಾಯವನ್ನು ಮೇಲಕ್ಕೆತ್ತುವುದಲ್ಲ; ಇದು ಭಾರತದ ವೈವಿಧ್ಯಮಯ ಸಮಾಜದ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳುವ ಬಗ್ಗೆ. ಈ ಅಂಚಿನಲ್ಲಿರುವ ವಿಭಾಗವನ್ನು ಸಬಲೀಕರಣಗೊಳಿಸುವ ಮೂಲಕ ಭಾರತವು ಹೆಚ್ಚು ಅಂತರ್ಗತ ಮತ್ತು ಸಮಾನ ರಾಷ್ಟ್ರವನ್ನು ರಚಿಸಬಹುದು. ಮುಂದಿನ ಹಾದಿಗೆ ಸರ್ಕಾರ, ನಾಗರಿಕ ಸಮಾಜ ಸಂಸ್ಥೆಗಳು ಮತ್ತು ಮುಸ್ಲಿಂ ಸಮುದಾಯದ ಸಾಮೂಹಿಕ ಪ್ರಯತ್ನದ ಅಗತ್ಯವಿದೆ. ಪಸ್ಮಾಂಡದ ಕಾರಣವನ್ನು ಗುರುತಿಸುವುದು ಮತ್ತು ಅದರ ಪರಿಹಾರಕ್ಕಾಗಿ ಕೆಲಸ ಮಾಡುವುದು ಕೇವಲ ನೈತಿಕ ಅಗತ್ಯವಲ್ಲ ಆದರೆ ಬಲವಾದ ಮತ್ತು ಹೆಚ್ಚು ಸಮೃದ್ಧ ಭಾರತವನ್ನು ನಿರ್ಮಿಸುವ ಪ್ರಮುಖ ಹೆಜ್ಜೆಯಾಗಿದೆ.

ಅದ್ನಾನ್ ಕಮರ್, ಅಖಿಲ ಭಾರತ ಪಸ್ಮಾಂಡ ಮುಸ್ಲಿಂ ಮಹಾಜ್ ಅಧ್ಯಕ್ಷ, ತೆಲಂಗಾಣ. ಅವರು @TheAdnanQamar ಅಡಿಯಲ್ಲಿ ಟ್ವೀಟ್ ಮಾಡಿದ್ದಾರೆ.

# ಕಮಲಾ ಹಂಪನಾ ಅವರ ಅಂತಿಮ ದರ್ಶನ ಪಡೆದ ಸಿಎಂ

## ಕನ್ನಡದ ಉತ್ತಮ ಸಾಹಿತಿಯನ್ನು ಕಳೆದುಕೊಂಡಿದ್ದೇವೆ: ಸಿಎಂ ಸಿದ್ದು

**ಬೆಂಗಳೂರು :** ಕನ್ನಡದ ಉತ್ತಮ ಸಾಹಿತಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ರವೀಂದ್ರಕಲಾ ಕ್ಷೇತ್ರದಲ್ಲಿ ಹಿರಿಯ ಸಾಹಿತಿ ಡಾಖಖ ಕಮಲ ಹಂಪನಾ ಅವರ ಪ್ರಾರ್ಥಿವ ಶರೀರ ದರ್ಶನ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಕಮಲಾ ಹಂಪನಾ ಅವರನ್ನು ನಾಲ್ಕೈದು ತಿಂಗಳ ಹಿಂದೆ ಭೇಟಿಯಾಗಿದ್ದೆ. ಮಹಿಳಾ ಸಾಹಿತಿಗಳ ಪೈಕಿ ಅತಿ ಹೆಚ್ಚು ಅಂದರೆ 48 ಕೃತಿಗಳನ್ನು ಬರೆದಿದ್ದಾರೆ. ಬೋಧಕರಾಗಿ, ಸಂಶೋಧಕರಾಗಿ, ಸಾಹಿತಿಯಾಗಿ ಕನ್ನಡ ಭಾಷೆಗಾಗಿ ಬಹಳ ಶ್ರಮಿಸಿದ್ದಾರೆ. ಪ್ರಾಕೃತ ಭಾಷೆಯ ಕುರಿತು ಸಂಶೋಧನೆ ಮಾಡಿದ್ದಾರೆ. ಬೆಂಗಳೂರು, ಮೈಸೂರು, ವಿಜಯನಗರಗಳಲ್ಲಿ ಕನ್ನಡ ಬೋಧಕರಾಗಿ ಕೆಲಸ ಮಾಡಿದ್ದಾರೆ ಎಂದರು.

ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಹಂಪನಾ ಮತ್ತು ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿಎನ್ನು ಭಗವಂತ ನೀಡಲಿ ಎಂದು ಪ್ರಾರ್ಥನೆ ಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

# ಕವಿತಾಳ ಪಟಣ್ಣದ ಕುಡಿಯುವ ನೀರಿನ ಕೆರೆಗೆ ಶಾಸಕ ಹಂಪಯ್ಯ ಸಾಹುಕಾರ ಭೇಟಿ ಕೆರೆ ಭರ್ತಿ ಮಾಡಲು ಅಧಿಕಾರಿಗಳಿಗೆ ಖಡಕ್ ಸೂಚನೆ

**ಕವಿತಾಳ :** ಪಟಣ್ಣ ಪಂಚಾಯತ ವ್ಯಾಪ್ತಿಗೆ ಒಳಪಡುವ 16ನೇ ವಾರ್ಡನಲ್ಲಿರುವ ಕುಡಿಯುವ ನೀರಿನ ಕೆರೆಗೆ ಮಾನ್ವಿ ವಿಧಾನಸಭೆ ಶಾಸಕ ಹಂಪಯ್ಯ ಸಾಹುಕಾರ ಭೇಟಿ ನೀಡಿ ಪರಿಶೀಲಿಸಿದರು. ಪಟಣ್ಣಕ್ಕೆ ಕಳೆದ ಒಂದು ತಿಂಗಳಿನಿಂದ ನೀರಿನ ಸಮಸ್ಯೆ ಉಂಟಾಗಿದ್ದು ಇದರ ಹಿನ್ನೆಲೆಯಲ್ಲಿ ಜೂನ್ 15 ರಿಂದ 25 ರವರೆಗೂ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಗೆ ನೀರು ಹರಿಸಲಾಗಿದೆ, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಬೇಗನೆ ಎಚ್ಚೆತ್ತು ಮೋಟರಾ ಪಂಪ್ ಮೂಲಕ ಕೂಡಲೇ ಕೆರೆಯನ್ನು ಭರ್ತಿ ಮಾಡಲು ಸೂಚನೆ ನೀಡಿದರು, ಒಂದು ವೇಳೆ ಸಾರ್ವಜನಿಕರಿಗೆ ನೀರಿನ ತೊಂದರೆ ಉಂಟಾದ–ರೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು. ಈ ಸಂದರ್ಭದಲ್ಲಿ ಪಟಣ್ಣ ಪಂಚಾಯತಿ ಮುಖ್ಯಾಧಿಕಾರಿ ರೆಡ್ಡಿ ರಾಯನಗೌಡ, ಮಾಜಿ ಪಟಣ್ಣ ಪಂಚಾಯತಿ ಸದಸ್ಯ ಬಸವರಾಜ ಹಣಗಿ, ಕಿರಿಯ ಅಭಿಯಂತರರಾದ ನರಸಮ್ಮ, ಮುಖಂಡರಾದ ಸುರೇಶ, ರಾಜೇಶ ಬನ್ನಿಗಿಡದ್, ಶಿವಣ್ಣ ವಕೀಲರು, ಮತ್ತು ಪಟಣ್ಣ ಪಂಚಾಯತಿ ಸಿಬ್ಬಂದಿಗಳಾದ ರಾಘವೇಂದ್ರ ಮುತಾಲಿಕ್, ಪ್ರಶಾಂತ, ವೆಂಕಟೇಶ, ರಾಮಣ್ಣ ಉಪಸ್ಥಿತರಿದ್ದರು.



# ಕರ್ನಾಟಕ ಸಂಭ್ರಮ-50ರ ಜ್ಯೋತಿ ರಥಯಾತ್ರೆಗೆ ವಿಜೃಂಭಣೆಯಿಂದ ಚಾಲನೆ



**ಹುಬ್ಬಳ್ಳಿ :** ಕರ್ನಾಟಕ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹೊರಡಿಸಿರುವ ಕರ್ನಾಟಕ ಸಂಭ್ರಮ-50 ರ ಜ್ಯೋತಿ ರಥ ಯಾತ್ರೆಗೆ ಇಂದು ಸರ್ಕ್ಯೂಟ್ ಹೌಸ್‌ನಲ್ಲಿ ಹುಬ್ಬಳ್ಳಿ ತಾಲೂಕು ಆಡಳಿತ ಹಾಗೂ ಕನ್ನಡ ಸಂಘ, ಸಂಸ್ಥೆ, ಸಾಹಿತ್ಯ ಪರಿಷತ್ತು ವತಿಯಿಂದ ವಿಜೃಂಭಣೆಯಿಂದ ಚಾಲನೆ ನೀಡಲಾಯಿತು.

ಶಾಸಕರಾದ ಮಹೇಶ ಟೆಂಗಿನಕಾಯಿ ಅವರು ರಥಕ್ಕೆ ಪುಷ್ಪಾರ್ಪನೆ ಮಾಡಿ, ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಬೆಕ್ಕೇರಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷರಾದ ಡಾ.ಲಿಂಗರಾಜ ಅಂಗಡಿ, ಸಂಜೀವ ಧುಮ್ಮಕನಾಳ ಸೇರಿದಂತೆ ಅನೇಕ ಕನ್ನಡ ಅಭಿಮಾನಿಗಳು, ಕನ್ನಡ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು.

ಜ್ಯೋತಿ ರಥ ಯಾತ್ರೆಗೆ ಶಿವಳ್ಳಿಯ ಡೊಳ್ಳು ಕುಣಿತ, ಶೆರೇವಾಡದ ಕರಡಿ ಮಜಲು, ಸುಳ್ಳದ ಜಗ್ಗಲಿಗೆ ಮೇಳ, ಹುಬ್ಬಳ್ಳಿಯ ಗೊಂಬೆ ತಂಡ, ವಿದ್ಯಾರ್ಥಿಗಳ ಕುಣಿತ ಹಾಗೂ ಕಲಾವಿದರ ಕನ್ನಡ ಹಾಡುಗಳ ಗಾಯನ ಮೆರಗು ತಂದವು.

ಜ್ಯೋತಿ ರಥ ಯಾತ್ರೆಯು ಹುಬ್ಬಳ್ಳಿ ನಗರದ ಪ್ರಮುಖ ವೃತ್ತಗಳಾದ ಅಂಬೇಡ್ಕರ್ ವೃತ್ತ, ಚನ್ನಮ್ಮ ವೃತ್ತ, ಸಿದ್ಧಾರೂಢ ಮಠ ಸೇರಿದಂತೆ ನಗರದ ಬೀದಿಗಳಲ್ಲಿ ಸಂಚರಿಸಿ, ನಂತರ ಕುಂದಗೋಳ ತಾಲೂಕು ತಲುಪಲಿದೆ.

ಹಳೇ ಹುಬ್ಬಳ್ಳಿಯ ಸ್ವರ್ಣ ಮಯೂರಿ ಶಾಲೆಯ ವಿದ್ಯಾರ್ಥಿಗಳು ಕನ್ನಡ ಗೀತೆಗೆ ಆಕರ್ಷಕ ನೃತ್ಯವನ್ನು ಪ್ರದರ್ಶಿಸಿ ನೋಡುಗರ ಕಣ್ಮನ ಸೆಳೆದರು.

# ಕೇಂದ್ರ ಸರ್ಕಾರದ ಕ್ರಮ ಶ್ಲಾಘನಿಯ: ಸಂಸದರ ಕಡಾಡಿ



**ಮೂಡಲಗಿ :** ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಬೆಳಗಾವಿ ಜಿಲ್ಲೆಯ 4 ಲಕ್ಷ 95 ಸಾವಿರಕ್ಕೂ ಹೆಚ್ಚು ರೈತರ ಬ್ಯಾಂಕ್ ಖಾತೆಗಳಿಗೆ 99.14 ಕೋಟಿ ರೂ ಡಿಬಿಟಿ ಮೂಲಕ ಜಮಾ ಮಾಡಲಾಗಿದೆ. ಇದು ದೇಶದ ರೈತರಿಗೆ ಆರ್ಥಿಕ ಚೈತನ್ಯ ತುಂಬಿರುವ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಮೊದಲ ಕಾರ್ಯವಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಕೇಂದ್ರ ಸರ್ಕಾರದ ಕ್ರಮವನ್ನು ಶ್ಲಾಘಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಸಂಸದ ಈರಣ್ಣ ಕಡಾಡಿ ಅವರು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 17ನೇ ಕಂತಿನ ಭಾಗವಾಗಿ ದೇಶದ 9.26 ಕೋಟಿಗೂ ಹೆಚ್ಚು ಫಲಾನುಭವಿ ರೈತರ ಖಾತೆಗಳಿಗೆ ರೂ. 20 ಸಾವಿರ ಕೋಟಿ ರೂಪಾಯಿ ಹಾಗೂ ರಾಜ್ಯದ 42.64 ಲಕ್ಷಕ್ಕೂ ಹೆಚ್ಚು ರೈತರ ಖಾತೆಗೆ 852.97 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಇಲ್ಲಿಯವರೆಗೆ, 11 ಕೋಟಿಗೂ ಹೆಚ್ಚು ರೈತರ ಖಾತೆಗಳಿಗೆ ರೂ. 3.03 ಲಕ್ಷ ಕೋಟಿಗೂ ಹೆಚ್ಚು ಹಣವನ್ನು ನೇರವಾಗಿ ವರ್ಗಾಯಿಸಲಾಗಿದೆ ಎಂದರು.

ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನೆಲ್ಲೆ ರೈತ ಕಲ್ಯಾಣಕ್ಕೆ ಸಂಬಂಧಿಸಿದ, ರೈತರು ಮತ್ತು ಕೃಷಿ ಕ್ಷೇತ್ರದ ಯೋಜನೆಗಳ ಕಡತಕ್ಕೆ ಸಹಿ ಹಾಕುವ ಮೂಲಕ ನಮ್ಮ ಕೇಂದ್ರ ಸರ್ಕಾರದಿಂದ ಭವಿಷ್ಯದಲ್ಲಿ ರೈತಪರ ಕಾರ್ಯಗಳು ಮುಂದುವರೆಯಲಿವೆ ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದರು.

ಕೃಷಿ ಸಖಿ ಕಾರ್ಯಕ್ರಮವು 'ಲಖಪತಿ ದೀದಿ' ಅಭಿಯಾನದ ಒಂದು ಭಾಗವಾಗಿದೆ. ಕೃಷಿ ಸಖಿ ಆಗಲು ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಕೃಷಿಯ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಇಲ್ಲಿಯವರೆಗೆ 34,000 ಕೃಷಿ ಸಖಿಗಳನ್ನು ಪ್ಯಾರಾ-ವಿಸ್ತರಣಾ ಕಾರ್ಯಕರ್ತರು ಎಂದು ಪ್ರಮಾಣೀಕರಿಸಲಾಗಿದೆ ಎಂದು ಸಂಸದ ಈರಣ್ಣ ಕಡಾಡಿ ಅವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಮೊಬೈಲ್ ಬಳಕೆಯಲ್ಲಿ ಸುರಕ್ಷಾ ಕ್ರಮ ಅಗತ್ಯ

**ಹುಬ್ಬಳ್ಳಿ :** ಪೊಲೀಸ್ ಎಂದರೇ ಭಯವಲ್ಲ ಭರವಸೆ ಎಂಬುದನ್ನು ಜನತೆ ಅರಿತುಕೊಳ್ಳಿ ಎಂದು ಹು-ಧಾ ಪೊಲೀಸ್ ಕಮೀಷನರ್ ರೇಣುಕಾ ಸುಕುಮಾರ ಹೇಳಿದರು.

ನಗರದಲ್ಲಿ ದೇಶಪಾಂಡೆನಗರದ ಸವಾಯಿ ಗಂಧರ್ವ ಸಭಾಭವನದಲ್ಲಿ ಹು-ಧಾ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಸಿಇಐಆರ್ ಪೊ?ರ್ಟಲ್ ಮುಖಾಂತರ ಪತ್ತೆಹಚ್ಚಿದ ಮೊಬೈಲ್ ಫೊ?ನ್‌ಗಳ ವಿತರಣಾ ಸಮಾರಂಭದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಇಂದು ಪ್ರತಿಯೊಬ್ಬರಿಗೂ ಮೊಬೈಲ್ ಪ್ರಪಂಚವಾಗಿ ಮಾರ್ಪಟ್ಟಿದೆ . ಏಳುವಾಗಲೂ, ಮಲಗುವಾಗಲೂ ಮೊಬೈಲ್ ನೋಡುತ್ತೇವೆ. ಅದೊಂದು ಕಿರಿಯ ಜಗತ್ತಾಗಿ ಮಾರ್ಪಟ್ಟಿದೆ. ಇಂತಹ ಮೊಬೈಲ್ ಕಳೆದುಕೊಂಡಾಗ ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಇಂತಹ ವೇಳೆ ಎದೆಗುಂದದೆ ಕೂಡಲೇ ಸಿಇಐಆರ್ ಪೋರ್ಟಲ್ ಮೂಲಕ ದೂರು ಸಲ್ಲಿಸಿ, ಮೊಬೈಲ್ ಖರೀದಿ ಮಾಡಿದ ವೇಳೆ ಆಎಂಇಐ ಕಾಯ್ದಿರಿಸಬೇಕು. ಮೊಬೈಲ್ ಕಳೆದುಕೊಂಡ ಕೂಡಲೇ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡುವುದು ಅವಶ್ಯವಾಗಿದೆ ಎಂದರು.

ಸಾರ್ವಜನಿಕರು ಮೊಬೈಲ್ ಬಳಸುವಾಗ ಸೂಕ್ತ ಸುರಕ್ಷಾ ಕ್ರಮಗಳನ್ನು ಪಾಲಿಸುವುದು ಅತ್ಯವಶ್ಯಕ. ಮೊಬೈಲ್ ಮೂಲಕ ನಿತ್ಯವೂ ಸಾರ್ವಜನಿಕರು ಮೋಸ ಹೋಗುತ್ತಿರುವ ಕುರಿತು ದಿನವೂ ಸೈಬರ್ ಠಾಣೆಗೆ ಹತ್ತಾರು ದೂರುಗಳು ದಾಖಲು ಆಗುತ್ತಿವೆ. ಸೈಬರ್ ಕ್ರೈಂ ಕುರಿತು ಹತ್ತಾರು ಜಾಗೃತಿ ಕಾರ್ಯಕ್ರಮ ಕೈಗೊಂಡು ಜನರಿಗೆ ಅರಿವು ಮೂಡಿಸಿದರೂ ಸಹ ಮೋಸಕ್ಕೆ ಒಳಗಾಗುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಸಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಯಾವುದೇ ಹಣಕಾಸಿನ ಮೋಸಕ್ಕೆ ಒಳಗಾದರೇ 1930 ಸಂಖ್ಯೆಗೆ ಹಾಗೂ ಸಾರ್ವಜನಿಕರು ಸಮಸ್ಯೆಗೆ ಒಳಗಾದರೇ 112 ಗೆ ಕರೆ ಮಾಡಿ ದೂರು ಸಲ್ಲಿಸಿದರೆ, ಕೂಡಲೇ ಪೊಲೀಸರು ಆಗಮಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆ ಎಂದರು.

ಇದೇ ವೇಳೆ ಒಂದು ವರ್ಷದಲ್ಲಿ ಕಳ್ಳತನವಾಗಿದ್ದ 49 ಲಕ್ಷ ಮೌಲ್ಯದ 315 ಮೊಬೈಲ್ ಗಳನ್ನು ವಾರಸುದಾರರಿಗೆ ಮರಳಿ ನೀಡಲಾಗಿದೆ ಎಂದರು. ದಾಖಲಾಗಿದ್ದ ಪ್ರಕರಣದಲ್ಲಿ ಶೇ. 30 ರಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇನ್ನುಳಿದ ಮೊಬೈಲ್ ಕಳೆದುಕೊಂಡ ವಾರಸುದಾರರಿಗೆ ಶೀಘ್ರದಲ್ಲೇ ಪತ್ತೆ ಹಚ್ಚಿ ಮರಳಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಕುಶಾಲ್ ಚೌಕ್ಸೆ, ಎಸಿಪಿ ಶಿವಪ್ರಕಾಶ್ ನಾಯ್ಕ್ ಡಿಸಿಪಿ ಯಲ್ಲಪ್ಪ ಕಾಶಪ್ಪನವರ, ಸಿಇಎನ್ ಎಸಿಪಿ ಶಿವರಾಜ್ ಕಟಕಭಾವಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಹಾಗೂ ಮೊಬೈಲ್ ವಾರಸುದಾರರು ಉಪಸ್ಥಿತರಿದ್ದರು.

# ಕೈಗಾರಿಕೆಗಳ ಉತ್ತೇಜನಕ್ಕೆ ಬದ್ಧ

**ಧಾರವಾಡ :** ಪ್ರಧಾನಮಂತ್ರಿಗಳ ಆತ್ಮನಿರ್ಭರ, ವಿಕಸಿತ ಭಾರತ ಯೋಜನೆಗಳ ಮೂಲಕ ಸ್ವಾಲಂಬಿ, ಸಮೃದ್ಧಿ ಭಾರತ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ. ನಾನು ರೈತನ ಮಗ. ರಾಜ್ಯದ ರೈತರೊಂದಿಗೆ ನಾವಿದ್ದೇವೆ ಎಂದು ಕೇಂದ್ರ ಬೃಹತ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.



ಅವರು ಧಾರವಾಡ ಕೃಷಿ ವಿಶ್ವವಿದ್ಯಾಲಯದ ರೈತ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಕೇಂದ್ರ ಸರಕಾರದ ಪಿ.ಎಂ-ಕಿಸಾನ್ ಸಮ್ಮೇಳನದ ವರ್ಚುವಲ್ ಸಭೆಯಲ್ಲಿ ಭಾಗವಹಿಸಿ, ರೈತರನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಮಂತ್ರಿ ಕೃಷಿ ಸಮ್ಮಾನ ಯೋಜನೆ 2019 ರಲ್ಲಿ ಆರಂಭವಾಗಿದ್ದು, ಇಲ್ಲಿವರೆಗೆ ರೈತರಿಗೆ ಡಿಬಿಟಿ ಮೂಲಕ ಪ್ರತಿ ನಾಲ್ಕು ತಿಂಗಳಿಗೆ 2 ಸಾವಿರದಂತೆ ವರ್ಷಕ್ಕೆ ರೂ. 6 ಸಾವಿರಗಳನ್ನು ನೇರವಾಗಿ ಅವರ ಖಾತೆಗೆ ಜಮೆ ಮಾಡಲಾಗಿದೆ. ಒಟ್ಟು ಇಲ್ಲಿವರಗೆ 16 ಕಂತುಗಳಲ್ಲಿ ಕೃಷಿ ಸಮ್ಮಾನ ಸಹಾಯ ನೀಡಲಾಗಿದೆ. ಈಗ ಇಂದು 17 ನೇ ಕಂತು ಬಿಡುಗ-'ಡೆ ಮಾಡಿ, ಪ್ರಧಾನಿಗಳು ರೈತರ ಖಾತೆಗೆ ಜಮೆ ಮಾಡಿದ್ದಾರೆ ಎಂದು ಅವರು ಹೇಳಿದರು.

ಧಾರವಾಡ ಜಿಲ್ಲೆಯ 1 ಲಕ್ಷಕ್ಕೂ ಹೆಚ್ಚು ರೈತರಿಗೆ ಸುಮಾರು 20 ಕೋಟಿ ಪಿಎಂ-ಕಿಸಾನ ಸಮ್ಮಾನ ಯೋಜನೆಯ ಸಹಾಯಧನ ಇಂದು ಜಮೆ ಆಗುತ್ತಿದೆ ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಸಖಿಯರಾದ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ರೇಣುಕಾ ಹುಬ್ಬಳ್ಳಿ, ನವಲಗುಂದ ತಾಲೂಕಿನ ಶಿಲ್ಪಾ ಹೊಸವಕ್ಕಲ, ಅಣ್ಣಿಗೇರಿ ತಾಲೂಕಿನ ಸಬಿನಾ ಬೇಗಂ, ಉತ್ತರಕನ್ನಡ ಜಿಲ್ಲೆ ಹಳಿಯಾಳ ತಾಲೂಕಿನ ದೀಪಾ ಕಾನಮಕರ, ಹಾವೇರಿ ಜಿಲ್ಲೆಯ ಯಶೋಧಾ ಬಾರ್ಕಿ ಅವರಿಗೆ ಪ್ರಮಾಣ ಪತ್ರ ವಿತರಿಸಿ, ಸಚಿವ ಎಚ್.ಡಿ.ಕುಮಾರಸ್ವಾಮಿ ಶುಭ ಹಾರೈಸಿದರು.

ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ . ಎ ಸ್ . ಎ ಸ್ . ಅ ಂ ಗ ಡಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್.ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಧ್ಯಾಪಕ ಡಾ.ಸುರೇಖಾ ಸಂಕನಗೌಡರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಧಾರವಾಡ ಕೃಷಿವಿಜ್ಞಾನ ಕೇಂದ್ರ ನಿರ್ದೇಶಕ ಡಾ. ಕಾಂಬ್ರೆಕರ ಹಾಗೂ ಕೃಷಿ ವಿಶ್ವವಿದ್ಯಾಲಯ ಅಧಿಕಾರಿಗಳು, ಕೃಷಿ ಇಲಾಖೆ ಅಧಿಕಾರಿಗಲು, ರೈತ ಪ್ರಮುಖರು ಮತ್ತು ಧಾರವಾಡ, ಗದಗ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆಗಳ 500 ಕ್ಕೂ ಹೆಚ್ಚು ಕೃಷಿ ಸಖಿಯರು ಭಾಗವಹಿಸಿ, ಪ್ರಧಾನ ಮಂತ್ರಿಗಳ ಪಿಎಂ-ಕಿಸಾನ ಸಮ್ಮೇಳದ ವರ್ಚುವಲ್ ಸಭೆಯಲ್ಲಿ ಭಾಗವಹಿಸಿದ್ದರು.

# "ಪುಸ್ತಕಗಳು ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುವ ಮಾಧ್ಯಮ" ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅಭಿಮತ

**ಬೆಂಗಳೂರು :** ಪುಸ್ತಕ ಓದುವುದರಿಂದ ನನಗೆ ವೇಳೆಯ ಹೋಗಿದ್ದೆ ಗೊತ್ತಾಗುವುದಿಲ್ಲ. ಸುಖ ಸುಮ್ಮನೆ ಬೇರೆ ಬೇರೆ ಹವ್ಯಾಸಗಳಲ್ಲಿ ನಾನು ಇದುವರೆಗೂ ತೊಡಗಿಕೊಳ್ಳದೆ ನನ್ನ ಕೆಲಸದ ನಂತರ ಓದುವುದನ್ನೇ ಮುಖ್ಯ ಹವ್ಯಾಸ ಮಾಡಿಕೊಂಡು ನಿರಂತರವಾಗಿ ವಿವಿಧ ಪುಸ್ತಕಗಳನ್ನ ಓದುವುದು ನನ್ನ ಜೀವನದ ಹವ್ಯಾಸದ ಕಾರ್ಯಗಳಲ್ಲಿ ಒಂದು ನಾನು ರಾಜಕಾರಣದಲ್ಲಿ ಬಿಡುವು ಸಿಕ್ಕಾಗ ಬೇರೆ ಬೇರೆ ಪುಸ್ತಕಗಳನ್ನು ಖರೀದಿಸಿ ಅವುಗಳನ್ನ ಓದುತ್ತೇನೆ ಪುಸ್ತಕಗಳನ್ನು ಓದುವುದರಿಂದ ನನಗೊಂದು ಒಂದು ರೀತಿಯ ಮಾನಸಿಕ ನೆಮ್ಮದಿ ಮನಸ್ಸಿಗೆ ಆನಂದ ಮತ್ತು ನವ ಉಲ್ಲಾಸವನ್ನ ನೀಡುತ್ತದೆ ಪುಸ್ತಕಗಳು ನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುವ ಮಾಧ್ಯಮಗಳಾಗಿವೆ. ಕನ್ನಡ ಸರಸ್ವತ ಲೋಕದಲ್ಲಿ ಕನ್ನಡದ ಸಾಹಿತ್ಯ ಉತ್ತಮ ಸ್ಥಿತಿಯಲ್ಲಿದೆ.

ವಿಶ್ವವಿಖ್ಯಾತ ಸಾಹಿತಿಗಳ ಬಳಗ ಕರ್ನಾಟಕದಲ್ಲಿ ಜನಿಸಿ ಉತ್ತಮ ಸಾಹಿತ್ಯ ಕೃತಿಗಳನ್ನ ನಾಡಿಗೆ ನೀಡಿವೆ.

ಸಾಹಿತ್ಯದಲ್ಲಿ ಎಂಟು ಜ್ಞಾನಪೀಠ ಪ್ರಶಸ್ತಿಗಳು ಕರ್ನಾಟಕಕ್ಕೆ ಲಭಿಸಿದೆ.

ಇದರಿಂದ ನಮ್ಮ ಸಾಹಿತ್ಯ ಪರಂಪರೆಯು ದೇಶಕ್ಕೆ ಮಾದರಿಯಾಗಿದೆ. ಎಂದರು

ಅವರು ಬೆಂಗಳೂರಿನ ನಯನ ಸಭಾಂಗಣದಲ್ಲಿ ಡಾ. ಸಿದ್ದಯ್ಯ ಪುರಾಣಿಕ ಸ್ಮಾರಕ ಟ್ರಸ್ಟ್ ಕೊಪ್ಪಳ ಮತ್ತು ಡಾ. ಸಂಗಮೇಶ್ ಬಾಗವಾಡಗಿ ಹಿತೈಷಿಗಳ ಬಳಗ ಜಂಟಿಯಾಗಿ ಹಮ್ಮಿಕೊಂಡಿದ್ದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾಕ್ಟರ್ ಸಂಗಮೇಶ್ ಬಾದವಾಡಗಿ ಅವರ ಕಾಡು ಕಡಲಗಳ ನಾಡು ಅಂಡಮಾನ್ ಎಂಬ ಪ್ರವಾಸ ಕಥನ ಪುಸ್ತಕವನ್ನ ಲೋಕಾರ್ಪಣೆಗೊಳಿಸಿ ಮಾತನಾಡುತ್ತಾ ನಾನೊಬ್ಬ ಸಾಹಿತ್ಯ ಪ್ರೇಮಿ . ಪುಸ್ತಕಗಳನ್ನ ಓದುವುದರಿಂದ ಅದು



ಕೊಡುವ ಖುಷಿಯಷ್ಟು ನನಗೆ ಬೇರೆ ಯಾವುದೇ ಕಾರ್ಯಗಳು ಖುಷಿ ನಿಡುವುದಿಲ್ಲ ಗ್ರಂಥಾ ಲೇಖಕರಾದ ಶ್ರೀ ಸಂಗಮೇಶ್ ಬಾಗವಾಡಗಿಯವರು ಅಧಿಕಾರಿಯಾಗಿ ಕಲ್ಯಾಣ ಕರ್ನಾಟಕದ ಹಿತಚಿಂತಕರಾಗಿ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ವರ್ಚಸ್ಸಿನೊಂದಿಗೆ ಬೆಳೆದವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎರಡು ಅವಧಿಗೆ ಗೌರವ ಕಾರ್ಯದರ್ಶಿಯಾಗಿ ಸಾಹಿತಿಗಳೊಂದಿಗೆ ಸಾಹಿತ್ಯ ಸಂಘಟನೆಗಳೊಂದಿಗೆ ಗುರುತಿಸಿಕೊಂಡವರು ಸುಮಾರು 25ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನ ರಚಿಸಿ ಸಾಹಿತ್ಯ ಲೋಕದಲ್ಲಿ ಮಂಚೂಣಿಯಲ್ಲಿದ್ದಾರೆ

ನಾಡಿನ ಹಿರಿಯ ಸಾಹಿತಿಗಳಲ್ಲಿ ಒಬ್ಬರಾದ ಸಂಗಮೇಶ್ ಬಾದವಾಡಗಿ ಯವರು ನನಗೆ ಅತ್ಯಂತ ಆಪ್ತರಾಗಿದ್ದು ಅವರ ಸಾಹಿತ್ಯದ. ಸಾಂಸ್ಕೃತಿಕ. ಸಾಮಾಜಿಕ ಸೇವೆ ಅನನ್ಯವಾಗಿವೆ ಅವರು ಎಲೆಮರೆಕಾಯಿಯಂತೆ ಇಂತಹ ಸೇವೆಗಳಲ್ಲಿ ತೊಡಗಿಕೊಂಡಿ-ದ್ದರು ಇಲ್ಲಿಯವರೆಗೆ ಸೂಕ್ತ ಸ್ಥಾನಮಾನ ಸಿಗದಿರುವುದು ಅತ್ಯಂತ ವಿಷಾದನೀಯ. ಇನ್ನು ಮುಂದಾದರೂ ಅವರನ್ನು ಗುರುತಿಸಿ ಸಾಹಿತ್ಯ ವಲಯದಲ್ಲಿ ಯಾವುದಾದರೂ ಉನ್ನತ ಸ್ಥಾನವನ್ನು ನೀಡುವ ಅವಶ್ಯಕತೆ ಇದೆ ಎಂದು ನಾನು ಭಾವಿಸುವೆ ಎಂದು ಅಭಿಪ್ರಾಯ ಪಟ್ಟರು

ಅವರ ಕಾಡು ಕಡಲಗಳ ನಾಡು ಅಂಡಮಾನ್ ಎಂಬ ಪ್ರವಾಸ ಕಥನ ಅಂಡಮಾನ್ ನಿಕೋಬಾರ ಚಿತ್ರಣವನ್ನು ಕಣ್ಣಿಗೆ ಕಟ್ಟುವ ಹಾಗೆ ಅಕ್ಷರಗಳನ್ನ ಪೋಣಿಸಿ ವೈವಿಧ್ಯಮಯ ರಂಗುರಂಗಿನ ಚಿತ್ರಗಳೊಂದಿಗೆ ವಿವರಿಸಿ ಓದುಗರ ಮನಸ್ಸನ್ನು ಗೆದ್ದಿದ್ದಾರೆ.

ಈ ಕೃತಿಯ ಲೋಕಾರ್ಪಣೆ ಮಾಡುವುದು ನನಗೆ ಅತ್ಯಂತ ಖುಷಿ ಕೊಟ್ಟಿದೆ ಎಂದು ಅಭಿಮಾನದಿಂದ ಹೇಳಿದರು.

ಗಾದೆ ಹಳೆಯದಾದರೇನು ಅರ್ಥ ನವನವೀನ ಎಂಬ ಪ್ರಬಂಧವನ್ನು ಶ್ರೀಯುತ ಬಿ ಎಮ್ ಹಿರೇಮಠ್ ನಿವೃತ್ತ ಉಪನ್ಯಾಸಕರು, ಮುದ್ದೇಬಿಹಾಳ ಲೋಕಾರ್ಪಣೆಗೊಳಿಸಿ ಗಾದೆಗಳ ಮಹತ್ವ ಜೀವನದಲ್ಲಿ ಗಾದೆಗಳಿಗಿರುವ ಪ್ರಾಮುಖ್ಯತೆ ನೂರು ಪುಟಗಳ ವಿವರಣೆಯನ್ನು ಕೇವಲ ಒಂದು ಸಾಲಿನಲ್ಲಿ ಹೇಳುವ ಗಾದೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿ ಗಾದೆಗಳು ಹಳೆಯದಾದರೂ ಇಂದಿಗೂ ಪ್ರಸ್ತುತವಾಗಿವೆ ಸಂದರ್ಭನುಸಾರವಾಗಿ ಗಾದೆಗಳನ್ನು ಬಳಸುವುದರಿಂದ ಸಾಹಿತ್ಯ ಭಾಷಣಕ್ಕೂ ಕೃತಿ ರಚನೆಯಲ್ಲಿ ಗಾದೆಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ ಬಾದವಾಡಗಿ ಅವರ ಈ ಪ್ರಬಂಧ ಲೇಖನ ಪುಸ್ತಕ ಚೆನ್ನಾಗಿ ಮೂಡಿ ಬಂದಿದೆ ಈ ರೀತಿಯ ಪುಸ್ತಕಗಳು ಹೆಚ್ಚಾಗಿ ಹೊರಬರಲಿ ಎಂದು ಆಶಿಸಿ ಪುಸ್ತಕವನ್ನು ಲೋಕಾರ್ಪಣೆ ಗೊಳಿಸಿ ಮಾತನಾಡಿದರು.

ಡಾ. ಬಸವರಾಜ ಬಲ್ಲೂರ್ ಬೀದರ್ ಅವರು ಎರಡು ಪುಸ್ತಕಗಳ ಕುರಿತು ಮಾರ್ಮಿಕವಾಗಿ ವಿಮರ್ಶೆ ಮಾಡುತ್ತಾ ಪುಸ್ತಕಗಳಲ್ಲಿನ ಮಹತ್ವದ ಸಂಗತಿಗಳನ್ನು ವಿವರಿಸಿದರು.

ಕಾಡು ಕಡಲಗಳ ನಾಡು ಅಂಡಮಾನ್ ಎಂಬ ಪ್ರವಾಸ ಕಥನಾದ ಕುರಿತು ವಿಶೇಷವಾಗಿ ಸಾಹಿತ್ಯ ಲೋಕದ ಚಿತ್ರಣವನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾ ಅಂಡಮಾನ್ ಪ್ರವಾಸ ಕಥನವನ್ನು ಕಣ್ಣು ಕಟ್ಟುವ ಹಾಗೆ ವಿಶ್ಲೇಷಿಸಿ ವಿಮರ್ಶಿಸಿದರು. ಒಂದು ಪುಸ್ತಕದ ಪ್ರಕಾರ ಪ್ರವಾಸವನ್ನು ದೇಶ ಸುತ್ತು ಕೋಶ ಓದು ಇವೆರಡರ ಅನುಭವಗಳಿಂದ ಆದೇಶದ ಸಂಸ್ಕೃತಿ ಸಾಮಾಜಿಕ ನಡವಳಿಕೆಗಳನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ ನಾವು ಪ್ರವಾಸ ಕೈಕೊಂಡಾಗ ಅಲ್ಲಿನ ಪ್ರಮುಖವಾದ ಸ್ಥಳಗಳಿಗೆ ಭೇಟಿ ನೀಡಿ ವಾಪಸ್ ಆಗುತ್ತೇವೆ ಆದರೆ ಒಬ್ಬ ಸಾಹಿತಿ ಪ್ರವಾಸ ಕೈಕೊಂಡು ಅಲ್ಲಿನ ಸಂಸ್ಕೃತಿ ಭೌಗೋಳಿಕ ಹಾಗೂ ರಾಜಕೀಯ ವಿವರಣೆ ಅಭಿವೃದ್ಧಿ ಹಾಗೂ ನೋಡುವ ಸ್ಥಳಗಳ ವಿವರಣೆ ಈ ಎಲ್ಲ ಸಮಗ್ರತೆಗಳನ್ನು ತನ್ನ ಪ್ರವಾಸ ಕಥನದಲ್ಲಿ ಕಟ್ಟಿಕೊಡುತ್ತಾನೆ ಇದರಿಂದ ಆ ಪುಸ್ತಕವು ನಾವು ಆ ಸ್ಥಳಕ್ಕೆ ಹೋಗದೆ ಇದ್ದರೂ ಕೂಡ ಹೋಗಿ ಬಂದದ್ದಕ್ಕಿಂತ ಹೆಚ್ಚಿನ ಜ್ಞಾನವನ್ನು ನೀಡುತ್ತದೆ ಈ ಕೃತಿಯ ಬಗ್ಗೆ ಸಂಗಮೇಶ್ ಬಾದವಾಡಗಿ ಅವರು ತಾವು ಅಲ್ಲಿ ಕಳೆದ ದಿನಗಳಲ್ಲಿ ಅಂದಮಾನ ದ್ವೀಪಗಳ ವೈಶಿಷ್ಟ ನೈಸರ್ಗಿಕ ಚಲುವು ಕಾಡುಗಳು ಜರವಾ ಜನಾಂಗ ಸಮುದ್ರದ ಕಿನಾರೆಗಳು ಸ್ವಾತಂತ್ರ್ಯ ಸೇನಾನಿಗಳು ವೀರ ಸಾವರ್ಕರ್ ಇತರೆ ವಿಷಯ ಜೊತೆಗೆ ತಮ್ಮ ಮೋಜು ಮಸ್ತಿಯ ವಿವರಗಳನ್ನು ಲಘು ದಾಟಿಯಲ್ಲಿ ಕಟ್ಟಿ-ಕೊಟ್ಟು ಉತ್ತಮವಾಗಿ ರಚಿಸಿರುವುದರಿಂದ ಈ ಕೃತಿ ಒಂದು ಮಾರ್ಗದರ್ಶನಂತೆ ಕೂಡ ಕೆಲಸ ಮಾಡಬಲ್ಲದು ಎಂದು ವಿವರಿಸಿದರು.

ಸಮಾರಂಭದಲ್ಲಿ ಸಿದ್ದಯ್ಯ ಪುರಾಣಿಕ ಸ್ಮಾರಕ ಟ್ರಸ್ಟಿನ ಸಂಚಾಲಕರಾದ ಮಹೇಶ್ ಬಾಬು ಸುರ್ವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಅರವಿಂದ ಮಾಲಗಿತ್ತಿ ನಿವೃತ್ತ ಪೊಲೀಸ್ ಎಸ್ ಪಿ ಬಸವರಾಜ್ ಮಾಲಗಿತ್ತಿ ಸಾಹಿತಿ ಪತ್ರಕರ್ತ ಮೈಪಾಲ ರೆಡ್ಡಿ ಮುನ್ನೂರು. ಮಲ್ಲಿಕಾರ್ಜುನ್ ಕಡಕೋಳ ಸಂಗಮೇಶ್ ಬಾದವಾಡಗಿ ಹಿತೈಷಿ ಬಳಗದ ದಾಮೋದರ್ ಕೆ ವೆಂಕಟರಮಣ ಸ್ವಾಮಿ ಡಾಕಪ್ಪ ಲೋಕಪ್ಪ ಎಂ ಬಿಕೆ ವೆಂಕಟೇಶ್ ಉಪಸ್ಥಿತರಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು.

ಸಂಗಮೇಶ್ ಬಾದವಾಡಗಿಯವರು ಆಡಳಿತದ ಜೊತೆಗೆ ಸಾಹಿತ್ಯ ಪಯಣದ ಬಗ್ಗೆ ವಿವರಿಸಿ ತಮ್ಮಿಂದ 25 ಕೃತಿಗಳು ಲೋಕಾರ್ಪಣೆಗೊಂಡಿದ್ದನ್ನ ಸ್ಮರಿಸಿದರು . ವಕೀಲಾದ ಬಸವರಾಜ್ ಹಾಗೂ ಭತ್ತದವರನ್ನು ಸನ್ಮಾನಿಸಲಾಯಿತು.

ಪ್ರಾರ್ಥನೆಯನ್ನು ಕುಮಾರ್ ಮುತ್ತೇಶ್ ಶುಶ್ರಾವ್ಯ ವಾಗಿ ಹಾಡಿದರು.

ಉಪನ್ಯಾಸಕ ಡಾ. ವಿ ಎಸ್ ಹಿರೇಮಠ್ ರವರು ಸೊಗಸಾಗಿ ನಿರೂಪಿಸಿದರು ಮಹೇಶ್ ಬಾಬು ವಂದಿಸಿದರು.

# ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಲ ವತಿಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆ

**ಕೊಪ್ಪಳ :** ನಗರದ ಕೋಟೆ ರಸ್ತೆಯಲ್ಲಿರುವ ದೇವಸ್ಥಾನ ಅವರಣದಲ್ಲಿ ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಳದ ವತಿಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು



ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಲದ ಅಧ್ಯಕ್ಷರಾದ ಶ್ರೀಮತಿ ಕೋಮಲ ಕುದುರೆ ಮೋತಿಯವರು ಮಾತನಾಡಿ ಪುರಾತನ ಕಾಲದಿಂದ ಬಂದಿರುವ ಯೋಗ ಎಲ್ಲಾ ರೋಗಗಳಿಗೆ ಮದ್ದು ಯೋಗ ಮಾಡುವುದರಿಂದ ಬಹಳಷ್ಟು ರೋಗಗಳನ್ನು ನಿಯಂತ್ರಣ ಮಾಡಬಹುದಾಗಿದೆ ಎಂದರು

ಸರ್ವರೋಗಕ್ಕೆ ಯೋಗ ಮದ್ದಾಗಿದ್ದು ನಮ್ಮ ಜೀವನ ಶೈಲಿಯಲ್ಲಿ ಯೋಗವನ್ನು ಅಳವಡಿಸಿಕೊಳ್ಳಬೇಕು ದಿನನಿತ್ಯ ಯೋಗ ಅಭ್ಯಾಸ ರೂಢಿಸಿಕೊಳ್ಳಬೇಕು ಆರೋಗ್ಯವೇ ಭಾಗ್ಯ ಆಹಾರವೇ ಆರೋಗ್ಯ ಎಂದವರು ಆರೋಗ್ಯ ನುಡಿಗಳಂತೆ ಪ್ರತಿದಿನ ಭದ್ಧ ಕೋನಶನ ಜಾನು ಶಿರ್ಶಾಸನ ವಕ್ರಸನ ಮತ್ತು ತ್ರಿಕೋನಸನ ಹೀಗೆ ಸುಮಾರು 84 ಆಸನಗಳು ಇವೆ ಕೆಲವೊಂದಾದರು ಮಾಡಬೇಕು ಧ್ಯಾನ ಪ್ರಾಣಾಯಾಮ ಕೂಡ ಮಾಡಬೇಕು ಈ ವರ್ಷದ ಧೇಯ ವಾಕ್ಯ ಇದಾಗಬೇಕು ಇದರಿಂದ ಮಹಿಳಾ ಸಬಲೀಕರಣ ಅಂದರೆ ಮಹಿಳೆ ಹೆಚ್ಚಿನ ಶಕ್ತಿ ಹೊಂದುವದು ಮುಖ್ಯ ಉದ್ದೇಶವಾಗಿದ್ದು ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ಜಿ ಯವರು ಹೇಳಿದಂತೆ ಅವರ ವಾಕ್ಯದಂತೆ ಪ್ರತಿಯೊಬ್ಬರು ಯೋಗ ಮಾಡುವುದರ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಳದ ಅಧ್ಯಕ್ಷರಾದ ಶ್ರೀಮತಿ ಕೋಮಲ ಕುದುರೆಮೋತಿ ಹೇಳಿದರು

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಸುಧಾ ಚಕ್ಕಿ ಈರಮ್ಮ ನೀಡಸೆಸಿ ನಿವೇದಿತಾ ಸಂಕಲಾಪುರ ಸುನಂದ ಗಂಗಾ ಜಯಶ್ರೀ ಶಿವ ಶೆಟ್ಟರ್ ಶಕುಂತಲಾ ಬಂಗಾರ ಶೆಟ್ಟರ್ ಶಾಂತ ಗೌರಿಮಠ ಲಲಿತ ಗುತ್ತಿ ಮಂಜುಳಾ ಭೋಸಲೆ ವರ್ಣೇಕರ್ ವಿ ಸ್ಪೂರ್ತಿ ಪಾವನಿ ಭರತ್ ಪವನ್ ಮತ್ತು ನೆಹಲ್ ನೀತು ಕೃತಿಕ ನಿರಂಜನ ನಿಶಾ ಮೊದಲಾದವರು ಕಾರ್ಯಕ್ರಮದಲ್ಲಿ ಭಾ-ಗಿಯಾಗಿದ್ದರು ಮಹಿಳೆಯರು ಮಕ್ಕಳು ಸಹ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಹನಗಂಡಿ ಗ್ರಾ.ಪಂ. ಬೇಜವಾಬ್ದಾರಿತನ ರಾಜ್ಯ ಹೆದ್ದಾರಿ ಬದಿ ಗಲೀಜು, ಪ್ರಯಾಣಿಕರು ಛೀಮಾರಿ

**ತೇರದಾಳ :** ಜಮಖಂಡಿ-ಕಾಗವಾಡ ರಾಜ್ಯಹೆದ್ದಾರಿಗೆಹೊಂದಿಕೊಂಡಿರುವ ಹನಗಂಡಿ ಗ್ರಾಮದ ಬಸ್ ನಿಲ್ದಾಣ ಬಳಿ ರಸ್ತೆ ಬದಿಗೆ ಮನಬಂದಂತೆ ಗಲೀಜು ಆಗುತ್ತಿದ್ದರು ಗ್ರಾಮ ಪಂಚಾಯತಿಯವರು ನಿರ್ಲಕ್ಷ್ಯ ವಹಿಸಿರುವುದಕ್ಕೆ ಪ್ರಯಾಣಿಕರು ಛೀಮಾರಿ ಹಾಕುವಂತಾಗಿದೆ.



ಗ್ರಾಪಂ ವತಿಯಿಂದ ಘನತ್ಯಾಜ್ಯ ವಿವೇವಾರಿ ವಾಹನ ಇದ್ದರೂ ಸಹ ಗ್ರಾಮದಲ್ಲಿನ ಕಸ ಹಾಗೂ ಅಂಗಡಿಗಳಲ್ಲಿನ ಕಸವನ್ನು ಸಂಗ್ರಹಿಸದ ಕಾರಣ ಗ್ರಾಮದ ತುಂಬೆಲ್ಲ ಕಸದ ರಾಶಿ ಕಾಣುತ್ತಿದೆ. ರಸ್ತೆ ಬದಿಗೆ ಹೊಂದಿಕೊಂಡಿರುವ ಎಗ್ ರೈಸ್, ಚಿಕನ್ ಹಾಗೂ ಇನ್ನಿತರ ಅಂಗಡಿಯವರು ಶೇಖರಯಾದ ಗಲೀಜನ್ನು ದೂರದ ಕಡೆಗೆ ಹಾಕದೆ ರಸ್ತೆ ಬದಿಗೆ ಹಾಕಿ ಹೋಗುತ್ತಿದ್ದಾರೆ. ಇದರಿಂದ ಗಾಳಿಗೆ ರಸ್ತೆ ಮೇಲೆ ಓಡಾಡುವ ಬೈಕ್ ಸವಾರರ ಮುಖಕ್ಕೆ ಗಲೀಜು ಬಂದು ತಾಗುತ್ತಿವೆ. ಅಷ್ಟೇ ಏಕೆ ದುರ್ವಾಸನೆ ಕೂಡ ಬಡಿಯುತ್ತಿದ್ದು, ಹನಗಂಡಿ ದಾಟುವವರೆಗೆ ಮೂಗು ಮುಚ್ಚಿಕೊಂಡು ಹೋಗುವ ಪರಸ್ಥಿತಿ ನಿರ್ಮಾಣವಾಗಿದೆ.

ಗ್ರಾಮ ಪಂಚಾಯತಿಗೆ ಸಾಕಷ್ಟು ಯುವಕರೇ ಸದಸ್ಯರು ಆಗಿದ್ದರು ಗ್ರಾಮದ ಸ್ವಚ್ಛತೆಗೆ ಆದ್ಯತೆ ನೀಡದಿರುವುದು ಗ್ರಾಮಸ್ಥರ ಅಸಮಾಧಾನಕ್ಕೆ ಕಾರಣವಾಗಿದೆ. ಅಲ್ಲದೆ ಬಿಜೆಪಿಯೇ ಅಧಿಕಾರದಲ್ಲಿದ್ದು, ಸ್ವಚ್ಛ ಭಾರತ್ ಮಿಶನ್ ಯೋಜನೆ, ಸ್ವಚ್ಛತೆ ಅಭಿಯಾನ ಕಾರ್ಯಕ್ರಮ ಮಾಯವಾಗಿರುವುದು ವಿಷಾದಕರ ಸಂಗತಿ. ಇನ್ನಾದರು ರಾಜ್ಯ ಹೆದ್ದಾರಿಯನ್ನು ಸ್ವಚ್ಛತೆ ಇಡುವ ಕೆಲಸ ಗ್ರಾಪಂ ಮಾಡುವುದೆ ಕಾದು ನೋಡಬೇಕಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State